# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:03 • ಸಂಚಿಕೆ: 10 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 02.07.2025 • ಬುಧವಾರ • ಪುಟ:04 • ಬೆಲೆ:2
Volume:03 • Issue: 10 • PRGI No:KARKAN/2023/88055 • VIJAYANAGARA • 02.07.2025 • Wednesday • Page:04 • Rs:2



Grow with Us, Advertise in Hampi Times
Print & Digital Media
“Looking to bring your sales and services to readers Fingertips? HAMPI TIMES is the ideal platform”
Call:9448633038/email:hampitimes@gmail.com


**ಮೈಕ್ರೋ ನ್ಯೂಸ್**

## ವಿಜಯನಗರ ಜಿಲ್ಲೆ ಪ್ರಗತಿಗೆ ಮುಖ್ಯ ಕಾರ್ಯದರ್ಶಿಗಳಿಂದ ಪ್ರಶಂಸೆ:

**ಹಂಪಿ ಟೈಮ್ಸ್ ಹೊಸಪೇಟೆ:**
ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಯಲ್ಲಿ (NSAP) ಶೇಕಡಾ 100ರಷ್ಟು ಪ್ರಗತಿ ಸಾಧಿಸಿದ್ದಕ್ಕಾಗಿ ವಿಜಯನಗರ ಜಿಲ್ಲೆಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರು ಭಾರಿ ಪ್ರಶಂಸೆ ವ್ಯಕ್ತಪಡಿಸಿ, ಪ್ರಶಂಸನಾ ಪತ್ರವನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿದ್ದಾರೆ.

**ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಯಲ್ಲಿ 100% ಪ್ರಗತಿ**

ಕಳೆದ ಮೇ 14 ರಂದು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ವಲಯ / ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ವಿಜಯನಗರ ಜಿಲ್ಲೆಯ ಈ ಉತ್ತಮ ಸಾಧನೆಯನ್ನು ಗಮನಿಸಿ, ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಈ ಅದ್ಭುತ ಪ್ರಗತಿಯು ಇಲಾಖಾಧಿಕಾರಿಗಳು ಹಾಗೂ ಇಲಾಖೆಯ ಎಲ್ಲಾ ಸಿಬ್ಬಂದಿಗಳ ಅಚಲವಾದ ಬದ್ಧತೆ, ನಿರಂತರ ಶ್ರಮ ಹಾಗೂ ಸಮನ್ವಯದ ಕಾರ್ಯ ಪದ್ಧತಿಯ ಫಲ ಎಂದು ಪ್ರಶಂಸನಾ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ತಂಡದ ಈ ಉತ್ಸಾಹ ಮತ್ತು ಕಠಿಣ ಪರಿಶ್ರಮವೇ ಈ ಯಶಸ್ಸಿಗೆ ನಾಂದಿಯಾಗಿದೆ. ಜಿಲ್ಲೆಯ ಸಮಗ್ರ ಅಭಿವೃದ್ಧಿಯನ್ನು ಮತ್ತಷ್ಟು ಬಲಪಡಿಸುವಿಕೆ ಮತ್ತು ಪ್ರಗತಿಪಥದಲ್ಲಿ ವಿಜಯನಗರ ಜಿಲ್ಲೆಯ ಸಾಧನೆಯು ಇತರ ಜಿಲ್ಲೆಗಳಿಗೂ ಪ್ರೇರಣೆಯಾಗಿದೆ ಎಂದು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಪತ್ರಿಕೆ ಸಮಾಜದ ಬದಲಾವಣೆಗೆ ದಿಕ್ಸೂಚಿ

### ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ ಅಭಿಮತ | ಹಂಪಿ ಟೈಮ್ಸ್ ದಿನಪತ್ರಿಕೆ ಸಾಮಾಜಿಕ ಕಾಳಜಿಯ ಕನ್ನಡಿ ಎಂದು ಶ್ಲಾಘನೆ

### ಕರ್ನಾಟಕ ಪತ್ರಕರ್ತರ ಸಂಘದಿಂದ ಪತ್ರಿಕಾ ದಿನಾಚರಣೆ | ಸಮಾಜದ ಒಳಿತಿಗೆ ನ್ಯಾಯಸಮ್ಮತ ಪತ್ರಿಕೋದ್ಯಮ ಅವಶ್ಯಕ







ಹೊಸಪೇಟೆಯಲ್ಲಿ ಕರ್ನಾಟಕ ಪತ್ರಕರ್ತರ ಸಂಘ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆಯನ್ನು ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ, ಎಸ್ಪಿ ಶ್ರೀಹರಿಬಾಬು ಉದ್ಘಾಟಿಸಿದರು, ಹಂಪಿ ಟೈಮ್ಸ್ ಎಸ್ಸೆಸ್ಸೆಲ್ಸಿ ಮಾರ್ಗದರ್ಶಿಯನ್ನು ಬಿಡುಗಡೆಗೊಳಿಸಿದರು.

**ಹಂಪಿ ಟೈಮ್ಸ್ ಹೊಸಪೇಟೆ**
ಸಮಾಜದ ಅಂಕುಡೊಂಕುಗಳನ್ನು ತಿದ್ದುವಲ್ಲಿ ಮಾಧ್ಯಮಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ನಗರದ ವಿಜ್ಞಾನ ಪಿಯು ಕಾಲೇಜ್ ಸಭಾಂಗಣದಲ್ಲಿ ಕರ್ನಾಟಕ ಪತ್ರಕರ್ತರ ಸಂಘ (ರಿ) ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆಯನ್ನು ಮಂಗಳವಾರ ಉದ್ಘಾಟಿಸಿ ಮಾತನಾಡಿದರು. ಹಂಪಿ ಟೈಮ್ಸ್ ದಿನಪತ್ರಿಕೆ ಯಾವ ರಾಜ್ಯ, ರಾಷ್ಟ್ರಮಟ್ಟದ ಪತ್ರಿಕೆಗೂ ಕಡಿಮೆ ಇಲ್ಲ. ಇದರಲ್ಲಿ ಬಳಸುವ ಪದಗಳು, ಪ್ರಕಟವಾಗುವ ಲೇಖನಗಳು, ಸಾಮಾಜಿಕ ಕಾಳಜಿ ಹೊಂದಿವೆ. ಪತ್ರಿಕೆ ಪತ್ರಕರ್ತನ ಮನಸ್ಥಿತಿಯನ್ನು ಎತ್ತಿ ತೋರಿಸುತ್ತದೆ. ಪರ್ತಕರ್ತರನ್ನು ರಾಷ್ಟ್ರ, ರಾಜ್ಯ, ಲೋಕಲ್ ಎಂದು ಅಳೆಯಲಾಗದು. ಅದು ಅವರವರ ಮನಸ್ಥಿತಿಯ ಮೇಲೆ ಪರಿಗಣಿಸಲ್ಪಡುತ್ತದೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ಪತ್ರಿಕೆಯವರು ಹಂಪಿ ಟೈಮ್ಸ್ ಬಗ್ಗೆ ಮಾತನಾಡುತ್ತಿದ್ದಾರೆ. ಇಂತಹ ಪತ್ರಿಕೆಗಳು ಸಮಾಜದ ಸುಧಾರಣೆ ಸಹಕಾರಿಯಾಗಬಲ್ಲವು. ಸಮಾಜದಲ್ಲಿರುವ ಲೋಪದೋಷಗಳು, ಭ್ರಷ್ಟಾಚಾರ, ಅನ್ಯಾಯಗಳು ಮತ್ತು ಇತರ ಸಾಮಾಜಿಕ ಸಮಸ್ಯೆಗಳನ್ನು ನಿರ್ಭೀತಿಯಿಂದ ಹೊರಗೆ ತರುವ ಮೂಲಕ ಪತ್ರಕರ್ತರು ಸಮಾಜದ ಕನ್ನಡಿಯಾಗಿ ಕಾರ್ಯನಿರ್ವಹಿಸಬೇಕು. ಯಾವುದೇ ಸಮಾಜವು ಪರಿಪೂರ್ಣವಾಗಿರುವುದಿಲ್ಲ. ಅನೇಕ ನ್ಯೂನತೆಗಳು, ತಪ್ಪುಗಳು ಮತ್ತು ಅನ್ಯಾಯಗಳು ಇರಬಹುದು. ಇವುಗಳನ್ನು ಗುರುತಿಸಿ, ಬೆಳಕಿಗೆ ತರುವ ಕೆಲಸವು ಸಮಾಜದ ಸುಧಾರಣೆಗೆ ಅಡಿಪಾಯವಾಗಿದೆ. ಸಮಾಜದಲ್ಲಿ ಧನಾತ್ಮಕ ಬದಲಾವಣೆಗಳನ್ನು ತರಲು ಪತ್ರಕರ್ತರ ಪಾತ್ರ ಪ್ರಮುಖವಾಗಿದೆ. ಒಂದು ಬಲಿಷ್ಠ ಪ್ರಜಾಪ್ರಭುತ್ವಕ್ಕೆ ಮುಕ್ತ ಮತ್ತು ನ್ಯಾಯಸಮ್ಮತ ಪತ್ರಿಕೋದ್ಯಮ ಅವಶ್ಯಕ. ಮಾಧ್ಯಮಗಳು ಸರ್ಕಾರದ ಕಾರ್ಯಗಳನ್ನು, ಸಾರ್ವಜನಿಕ ಸಂಸ್ಥೆಗಳ ನಡೆಗಳನ್ನು ಪ್ರಶ್ನಿಸುವ ಮತ್ತು ಅವುಗಳ ಹೊಣೆಗಾರಿಕೆಯನ್ನು ಖಚಿತಪಡಿಸುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುತ್ತವೆ. ಸುಳ್ಳು ಮಾಹಿತಿ ಅಥವಾ ವೈಯಕ್ತಿಕ ದ್ವೇಷಕ್ಕಾಗಿ ವರದಿ ಮಾಡದೆ, ಸಮಾಜದ ಒಳಿತಿಗಾಗಿ ಕೆಲಸ ಮಾಡಿದಾಗ ಓದುಗರ ವಿಶ್ವಾಸವನ್ನು ಗಳಿಸಲು ಸಾಧ್ಯ. ಒಟ್ಟಾರೆ, ಸಮಾಜದ ಸಮಸ್ಯೆಗಳನ್ನು ಗುರುತಿಸಿ, ಅವುಗಳನ್ನು ತಿದ್ದುವಲ್ಲಿ ಪತ್ರಕರ್ತರು ಕ್ರಿಯಾಶೀಲರಾಗಿ ತೊಡಗಿಸಿಕೊಂಡಾಗ ಮಾತ್ರ ಸಮಗ್ರ ಸಮಾಜದ ಅಭಿವೃದ್ಧಿ ಸಾಧ್ಯ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಲ್. ಶ್ರೀಹರಿಬಾಬು ಮಾತನಾಡಿ, ವಿದ್ಯಾರ್ಥಿಗಳು ಓದುವ ವಯಸ್ಸಿನಲ್ಲಿ ಅಭ್ಯಾಸಕ್ಕೆ ಹೆಚ್ಚು ಸಮಯ ನೀಡಬೇಕು. ಮಾದಕ ವ್ಯಸನಗಳಿಂದ ದೂರವಾದಾಗ ಮಾತ್ರ ಭವಿಷ್ಯದ ಬದುಕಿನಲ್ಲಿ ನೆಮ್ಮದಿ ಕಾಣಬಹುದು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪ್ರತಿಯೊಬ್ಬರೂ ಸಿದ್ಧರಾಗಬಹುದು. ಪರೀಕ್ಷೆ ಬರೆಯುವ ಉತ್ಸಾಹವನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು. ದಿನನಿತ್ಯದ ವಿಚಾರಗಳಗಳನ್ನು ಮಾಧ್ಯಮಗಳಿಂದ ಪಡೆದುಕೊಳ್ಳಲು ಸಾಧ್ಯ. ಪತ್ರಿಕೆ ಹಾಗೂ ಇಪೇಪರ್‌ಗಳ ಇಂದು ಹೆಚ್ಚು ಜನಪ್ರಿಯಪಡೆದುಕೊಂಡಿವೆ. ಜ್ಞಾನದ ಹಸಿವು ವಿದ್ಯಾರ್ಥಿಗಳಲ್ಲಿ ಇರಬೇಕು ಎಂದರು.

ನಗರಸಭೆ ಅಧ್ಯಕ್ಷ ರೂಪೇಶ ಕುಮಾರ್ ಮಾತನಾಡಿ, ಹಂಪಿ ಟೈಮ್ಸ್ ಹಮ್ಮಿಕೊಂಡಿರುವ ಈ ಭಾರಿ ಫಲಿತಾಂಶ ನಮ್ಮದೆ ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ ಸಂಜೆ ಸಾಮೂಹಿಕ ಓದಿಗೆ ನಗರಸಭೆಯಲ್ಲಿ ಚರ್ಚಿಸಿ, ವಿಜಯನಗರ ಜಿಲ್ಲೆಯ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಗತಿಗೆ ನಗರಸಭೆವತಿಯಿಂದ ಸಂಪೂರ್ಣ ಸಹಕಾರ ನೀಡಲಾಗುವುದು. ನಗರದ ಸ್ವಚ್ಛತೆ ಕಾಪಾಡಿಕೊಂಡಷ್ಟು ಆರೋಗ್ಯ ವೃದ್ಧಿಯಾಗುತ್ತದೆ ಎಂಬುದನ್ನು ಪ್ರತಿಯೊಬ್ಬರು ಅರಿತುಕೊಳ್ಳಬೇಕು ಎಂದರು.

>> 4

# ಬಳ್ಳಾರಿಯಲ್ಲಿನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಚರಿತ್ರೆ ಸೃಷ್ಟಿಸಲಿದೆ

### ಜಿಲ್ಲಾ ಉಸ್ತುವಾರಿ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಹೇಳಿಕೆ



**ಹಂಪಿ ಟೈಮ್ಸ್ ಬಳ್ಳಾರಿ**
ಬಳ್ಳಾರಿಯಲ್ಲಿ ಜರುಗಲಿರುವ 88 ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಹೊಣೆಗಾರಿಕೆ ನಮಗೆ ದೊರೆತಿರುವುದು ಅದೃಷ್ಟವಾಗಿದ್ದು, ಇದನ್ನು ಚಾರಿತ್ರಿಕವಾಗಿಸಲು ಕನ್ನಡ ಸಾಹಿತ್ಯ ಪರಿಷತ್ತಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಉಸ್ತುವಾರಿ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಅವರು ಹೇಳಿದರು.

ಮಂಗಳವಾರದಂದು, ಬೆಂಗಳೂರಿನ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿಯಲ್ಲಿ ಏರ್ಪಡಿಸಿದ್ದ 88 ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕನ್ನಡಿಗರ ಹೆಮ್ಮೆಯ ಉತ್ಸವವನ್ನು ಚಾರಿತ್ರಿಕವಾಗಿ ನಡೆಸಲು ಎಲ್ಲಾ ರೀತಿಯ ಸಹಕಾರ ನೀಡಲಾಗುವುದು. ಇದಕ್ಕೆ ಜಿಲ್ಲಾಡಳಿತವು ಸಂಪೂರ್ಣ ಸಜ್ಜುಗೊಳಿಸಿ ಸರ್ಕಾರದಿಂದ ಬೇಕಾದ ಎಲ್ಲಾ ಸೌಲಭ್ಯ, ನೆರವು ದೊರಕಿಸಿ ಕೊಡಲಾಗುವುದು. ಮುಂದಿನ ದಿನಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಸರ್ಕಾರ ಇನ್ನಷ್ಟು ನಿಕಟವಾಗಿ ಕೆಲಸ ಮಾಡಲಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿ ಅವರು ಮಾತನಾಡಿ, ಇಲ್ಲಿಯವರೆಗೆ ಅವಿಭಜಿತ ಬಳ್ಳಾರಿ ಜಿಲ್ಲೆಯಲ್ಲಿ ಐದು ಸಮ್ಮೇಳನಗಳು ನಡೆದಿದ್ದು, ಇದು ಆರನೆಯದು ಮತ್ತು ಸ್ವಾತಂತ್ರ್ಯ ನಂತರ ಎರಡನೆಯದಾಗಿದೆ. 68 ವರ್ಷಗಳ ನಂತರ ಬಳ್ಳಾರಿಯಲ್ಲಿ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ ಎಂದು ವಿವರಿಸಿದರು.

ಈಗಾಗಲೇ ಬಳ್ಳಾರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ 88 ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಬೂಕರ್ ಪುರಸ್ಕಾರದ ಮೂಲಕ ಜಾಗತಿಕ ಮನ್ನಣೆ ಪಡೆದಿರುವ ಬಾನು ಮುಷ್ತಾಕ್ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಇದಕ್ಕೆ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಅವರು ಪ್ರತಿಕ್ರಿಯಿಸಿ, ಈ ಆಯ್ಕೆಯನ್ನು ಮುಕ್ತ ಕಂಠದಿಂದ ಶ್ಲಾಘಿಸಿ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಲಿರುವ ಐದನೇಯ ಮಹಿಳೆ ಮತ್ತು ಮೊದಲ ಅಲ್ಪಸಂಖ್ಯಾತ ಮಹಿಳೆ ಆಗಲಿದ್ದಾರೆ ಎಂಬ ಸಂಗತಿ ಸಂತೋಷ ತರುವಂತಹದ್ದಾಗಿದೆ. ಹೆಚ್ಚಿನದಾಗಿ ಬಳ್ಳಾರಿಯಲ್ಲಿ ಸಮ್ಮೇಳನ ನಡೆಸುವ ಅವಕಾಶ ಸಿಕ್ಕಿರುವುದು ನನ್ನ ಅದೃಷ್ಟ ಎಂದು ಬಣ್ಣಿಸಿದರು.

ಬಳಿಕ ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳ ಇತಿಹಾಸ ವಿವರಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿ ಅವರು, ಸಮ್ಮೇಳನಗಳಿರುವ ಚಾರಿತ್ರಿಕ ಪರಂಪರೆಗೆ ಒತ್ತು ನೀಡಬೇಕಿದೆ ಎಂದರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಮಾತನಾಡಿ, 88 ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಬಳ್ಳಾರಿಯಲ್ಲಿ ನಡೆಯುತ್ತಿರುವುದು ಹೆಮ್ಮೆಯ ಸಂಗತಿಯಾಗಿದ್ದು, ಇದಕ್ಕೆ ಜಿಲ್ಲಾಡಳಿತ ಸಂಪೂರ್ಣ ಸಹಕಾರ ನೀಡಿ ಯಶಸ್ವಿಗೊಳಿಸಲಾಗುವುದು ಎಂದರು.

ಇದೇ ಸಂದರ್ಭದಲ್ಲಿ 2012ರಲ್ಲಿಯೇ ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರಾಗಿದ್ದ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಅವರಿಗೆ ಸಾಂಕೇತಿಕವಾಗಿ ವಿಶೇಷ ಗುರುತಿನ ಚೀಟಿ ನೀಡಲಾಯಿತು.

ಬಳಿಕ ಸಚಿವರು ಮತ್ತು ಬಳ್ಳಾರಿ ಜಿಲ್ಲಾಡಳಿತದ ಅಧಿಕಾರಿಗಳು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಹೊರ ಮತ್ತು ಒಳ ಆವರಣ ವೀಕ್ಷಿಸಿ ಪರಂಪರೆ ಮತ್ತು ಆಧುನಿಕತೆ ಬೆಸೆದಿರುವ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ಸಭೆಯಲ್ಲಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಬಿ.ಎಂ. ಪಟೇಲ್ ಪಾಂಡು, ಮಾಧ್ಯಮ ಸಂಚಾಲಕರಾದ ಎನ್.ಎಸ್.ಶ್ರೀಧರ ಮೂರ್ತಿ, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೈರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ಸಚಿವರ ಆಪ್ತ ಕಾರ್ಯದರ್ಶಿ ಹಾಗೂ ಸಿಬ್ಬಂದಿ ಇದ್ದರು.


SSLC
ಈ ಭಾರಿ ಫಲಿತಾಂಶ ನಮ್ಮದೆ
ದಿನಕ್ಕೊಂದು ವಿಷಯ ಪ್ರಶ್ನೋತ್ತರ ಸರಣಿ
ಹೈಸ್ಕೋರ್ ಗಳಿಸಲು
ನಿತ್ಯ ಬರೆದಿಟ್ಟುಕೊಂಡು ಓದಿ
ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ
ನಿಮ್ಮ ಅಭಿಪ್ರಾಯಗಳನ್ನು ಇ–ಮೇಲ್ ಮಾಡಿ
ಹಂಪಿ ಟೈಮ್ಸ್ ಮಾರ್ಗದರ್ಶಿ
ವಿಜಯನಗರ
E-mail: hampitimes@gmail.com


## SSLC ಹಂಪಿ ಟೈಮ್ಸ್ ಮಾರ್ಗದರ್ಶಿ – ಈ ಬಾರಿ ಫಲಿತಾಂಶ ನಮ್ಮದೆ

**ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ**

ಟಾಪರ್ ಆಗಲು ಇಂದಿನಿಂದಲೇ ಅಭ್ಯಾಸದಲ್ಲಿ ತೊಡಗಿಸಿಕೊಳ್ಳಿ

www.hampitimes.com / https://epaper.hampitimes.com

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

Hampi Times Margadarshi 2025-26

**ಗಣಿತ – ವಾಸ್ತವ ಸಂಖ್ಯೆಗಳು**

**ಅವಿಭಾಜ್ಯ ಸಂಖ್ಯೆಗಳು :-** ಒಂದನ್ನು ಹೊರತುಪಡಿಸಿ, ಎರಡು ಮತ್ತು ತನ್ನದೇ ಆದ ಸಂಖ್ಯೆಯಿಂದ ಭಾಗಿಸಲ್ಪಡುವ ಸಂಖ್ಯೆಗಳೇ ಅವಿಭಾಜ್ಯ ಸಂಖ್ಯೆಗಳು.

ಯಾವುದೇ ಎರಡು ಅವಿಭಾಜ್ಯ ಸಂಖ್ಯೆಗಳ ಮ.ಸಾ.ಅ - 1 ಹಾಗೂ ಲ.ಸಾ.ಅ - ಆ ಎರಡು ಸಂಖ್ಯೆಗಳ ಗುಣಲಬ್ಧವಾಗಿರುತ್ತದೆ.

**ಉದಾ :- 2 ಮತ್ತು 3 ರ ಮ.ಸಾ.ಅ ಮತ್ತು ಲ.ಸಾ.ಅ ಬರೆಯಿರಿ.**

( 2, 3 ) ರ ಮ.ಸಾ.ಅ - 1 ಮತ್ತು ( 2, 3 ) ರ ಲ.ಸಾ.ಅ - $2 \times 3 = 6$.

**ಉದಾ :- 90 ರ ಅವಿಭಾಜ್ಯ ಅಪವರ್ತನಗಳನ್ನು ಬರೆಯಿರಿ.**

$90 = 2 \times 3 \times 3 \times 5$

**ಪ್ರಶ್ನೆ – 5 ಮತ್ತು 7 ರ ಮ.ಸಾ.ಅ ಮತ್ತು ಲ.ಸಾ.ಅ ಬರೆಯಿರಿ. ( ಮೇ – 2025 )**

**ಪ್ರಶ್ನೆ - 120 ರ ಅವಿಭಾಜ್ಯ ಅಪವರ್ತನಗಳನ್ನು ಬರೆಯಿರಿ.**

- ಯಾವುದೇ ಎರಡು ಸಂಖ್ಯೆಗಳ ಗುಣಲಬ್ಧವು ಮ.ಸಾ.ಅ ಮತ್ತು ಲ.ಸಾ.ಅ ಗಳ ಗುಣಲಬ್ಧಕ್ಕೆ ಸಮನಾಗಿರುತ್ತದೆ.
- **$A \times B = H \times L$**

**ಸಂಯುಕ್ತ ಸಂಖ್ಯೆಗಳು :-** ಎರಡು ಅಥವಾ ಎರಡಕ್ಕಿಂತ ಹೆಚ್ಚು ಅವಿಭಾಜ್ಯ ಸಂಖ್ಯೆಗಳ ಗುಣಲಬ್ಧವೇ ಸಂಯುಕ್ತ ಸಂಖ್ಯೆಗಳು.

**ಅತಿ ಚಿಕ್ಕ ಸಂಯುಕ್ತ ಸಂಖ್ಯೆ - 4**

**ಅಂಕಗಣಿತದ ಮೂಲ ಪ್ರಮೇಯ**

ಪ್ರತಿಯೊಂದು ಸಂಯುಕ್ತ ಸಂಖ್ಯೆಯನ್ನು ಅವಿಭಾಜ್ಯಗಳ ಗುಣಲಬ್ಧವಾಗಿ ವ್ಯಕ್ತಪಡಿಸಬಹುದು ( ಅಪವರ್ತಿಸಬಹುದು ) ಮತ್ತು ಈ ಅಪವರ್ತಿಸುವಿಕೆಯು, ಅವಿಭಾಜ್ಯ ಅಪವರ್ತನಗಳು ಘಟಿಸುವ ಕ್ರಮವನ್ನು ಹೊರತುಪಡಿಸಿ ಅನನ್ಯವಾಗಿರುತ್ತದೆ.

**24 ಮತ್ತು 36 ರ ಮ.ಸಾ.ಅ ಮತ್ತು ಲ.ಸಾ.ಅ ವನ್ನು ಅವಿಭಾಜ್ಯ ಅಪವರ್ತನ ವಿಧಾನದಿಂದ ಕಂಡು ಹಿಡಿಯಿರಿ.**

$24 = 2 \times 2 \times 2 \times 3$ ಮತ್ತು $36 = 2 \times 2 \times 3 \times 3$

( 24, 30 ) ರ ಮ.ಸಾ.ಅ $= 2 \times 2 \times 3 = 12$

( 24, 30 ) ರ ಲ.ಸಾ.ಅ $= 2 \times 2 \times 3 \times 2 \times 3 = 72$

**ಪ್ರಶ್ನೆ :- 510 ಮತ್ತು 92 ಈ ಪೂರ್ಣಾಂಕಗಳ ಲ.ಸಾ.ಅ ಮತ್ತು ಮ.ಸಾ.ಅ.ಗಳನ್ನು ಅವಿಭಾಜ್ಯ ಅಪವರ್ತನ ವಿಧಾನದಿಂದ ಕಂಡು ಹಿಡಿದು , ಲ.ಸಾ.ಅ × ಮ.ಸಾ.ಅ. = ಆ ಎರಡು ಪೂರ್ಣಾಂಕಗಳ ಗುಣಲಬ್ದ ಎಂಬುದನ್ನು ತಾಳೆ ನೋಡಿ.** ( ಮುಂದುವರೆಯುವುದು... )

ಮಾರ್ಗದರ್ಶಿ ಗಣಿತ ಶಿಕ್ಷಕರು: ಶರ್ಮತ್ ಐ ಕಣದಮನಿ, ಸರ್ಕಾರಿ ಪ್ರೌಢಶಾಲೆ ಕುಂಚೂರು, ಹರಪನಹಳಿ ತಾಲೂಕು.


SAIMANI ENTERPRISES
Sales & Distribution Genuine Toshiba Photocopiers and Galtech Smart Panels,
M: 9686663132
Scan For Digital Colourful
HAMPI TIMES E-paper

## ಬೆಳಕಿನ ಹಾದಿ

# ಹಣ್ಣು ಮತ್ತು ತರಕಾರಿ



ಅಮ್ಮಾ! ನನಗೆ ಈ ಸಾಂಬಾರ್ ಬೇಡ. ಮೇಲಿನ ತಿಳಿ ನೀರು ಅನ್ನಕ್ಕೆ ಹಾಕು ಸಾಕು. ಎರಡನೇ ತರಗತಿ ಓದುತ್ತಿರುವ ನಿತ್ಯ ತನ್ನ ತಾಯಿಗೆ ಹೇಳಿದಳು.ತರಕಾರಿ ಆರೋಗ್ಯಕ್ಕೆ ಒಳ್ಳೆಯದು. ಇಂದು ತೊಂಡೆಕಾಯಿ ಹಾಕಿ ಸಾಂಬಾರ್ ಮಾಡಿದ್ದೇನೆ ಎರಡು ಹೋಳಾದರು ತಿನ್ನು. ಎಷ್ಟೊಂದು ಎಳೆಯ ಕಾಯಿ ಇದೆ ನೋಡು ಎಂದರು ನಿತ್ಯಳ ತಾಯಿ ಲಲಿತಾ.

ತಾಯಿಯ ಮಾತು ಮಗುವಿಗೆ ಬೇಡವಾಗಿತ್ತು. ಹಠಮಾಡಿ ತರಕಾರಿ ತಿನ್ನದೆ ಎದ್ದು ಹೋದಳು. ಹಣ್ಣಾದರು ತಿನ್ನು ಎಂದು ಅವಳ ಹಿಂದೆ ಬಂದ ತಾಯಿಗೆ ಬೇಡಮ್ಮ ಎಂಬ ಉತ್ತರವೆ ಸಿಕ್ಕಿತು.

ಮಾರನೆಯ ದಿನ ಮಗಳಿಗೆ ಊಟದ ಡಬ್ಬಿಗೆ ಕ್ಯಾರೇಟ್ ಮತ್ತು ಮೊಳಕೆ ಕಾಳು ಹಾಕಿ ಪಲ್ಯಮಾಡಿ ಅನ್ನ,ಮೊಸರಿನ ಜೊತೆಗೆ ಇಟ್ಟರು." ಸಾಯಂಕಾಲ ಮಗುವಿನ ತಿಂಡಿ ಡಬ್ಬಿ ತೊಳೆಯಲು ತೆಗೆದರೆ ಅನ್ನ ಮೊಸರು ಖಾಲಿಯಾಗಿತ್ತು. ಪಲ್ಯ ಹಾಗೇ ಇತ್ತು". ಕೋಪ ಬಂದರು ಸುಧಾರಿಸಿಕೊಂಡ ಲಲಿತಾ ಮಗಳ ಹತ್ತಿರ ಕರೆದು ಇದೇನು ಮಗಳೇ, ಪಲ್ಯ ಹಾಗೇ ಇದೆ ? ಸ್ವಲ್ಪ ರುಚಿ ನೋಡಬಾರದಾ ನೀನು! ನಿನಗೆ ಅಂತಲೇ ಹೆಸರು ಕಾಳು ಮೊಳಕೆ ತರಿಸಿ ಹಾಕಿದ್ದೆ ತಿನ್ನಬಾರದಾ ಎಂದರು. ಅಮ್ಮಾ! ನೀನು ಆಲೂಗಡ್ಡೆ ಪಲ್ಯ ಮಾಡು ನಂಗಿಷ್ಟ ಅದು ಬಿಟ್ಟು ಉಳಿದ ತರಕಾರಿ ನೋಡಿದರೆ ವಾಕರಿಕೆ ಬರುತ್ತೆ ಎಂದಳು. ಇವಳ ಸರಿದಾರಿಗೆ ತರಲು ಭಗವಂತನೇ ದಾರಿತೋರಿಸಬೇಕು ಎಂದು ಮಗಳ ಮಾತಿಗೆ ಸಿಟ್ಟಾಗದೆ ಅಡುಗೆ ಮನೆಗೆ ನಡೆದರು.

ಇದಾಗಿ ಕೆಲವು ದಿನ ಕಳೆದಮೇಲೆ ಶಾಲೆಯಲ್ಲಿರುವಾಗ, ಮನೆಯಲ್ಲಿರುವಾಗ ತುಂಬಾ ಸುಸ್ತು ಅನುಭವಿಸಿದಳು ಹುಡುಗಿ. ಅಂದು ಶಾಲೆಯಲ್ಲಿ ವಾರ್ಷಿಕ ಕ್ರೀಡಾಕೂಟವಿತ್ತು. ನಿತ್ಯ ಎಲ್ಲಾ ಆಟದಲ್ಲೂ ಸೋತಳು ಮತ್ತು ಬಹಳ ಸುಸ್ತು ಅನುಭವಿಸಿದಳು. ಮನೆಗೆ ಬಾಡಿದ ಮುಖ ಹೊತ್ತು ಬಂದಳು. ಇವಳ ಗಮನಿಸಿದ ಲಲಿತಾ ಅವಳ ಕೈ ಹಿಡಿದು ಹತ್ತಿರ ಕೂರಿಸಿಕೊಂಡು ಮಗು ಏನಾಯ್ತು? ಯಾಕೆ ಬೇಸರವಾಗಿದ್ದೀಯಲ್ಲ ಎಂದರು.

ಅಮ್ಮ! ನಾನು ಇಂದು ಎಲ್ಲಾ ಆಟದಲ್ಲೂ ಸೋತೆ ಮತ್ತು ನನಗೆ ತುಂಬಾ ಸುಸ್ತಾಗ್ತಿದೆ ಎಂದಳು." ನಿನ್ನ ಸಮಸ್ಯೆಗೆ ಕಾರಣ ಹಣ್ಣು, ತರಕಾರಿ ಮತ್ತು ಸೊಪ್ಪು ಬಳಸದೆ ಇರುವುದು. ಮಗಳೇ ಸೊಪ್ಪು ತರಕಾರಿಯಲ್ಲಿ ಪೌಷ್ಟಿಕ ಅಂಶ ಇರುವುದು. ಇದು ನಿನಗೆ ಶಕ್ತಿಯ ಕೊಡುವುದು. ನಿನ್ನ ಆಯಾಸ ಕಡಿಮೆ ಮಾಡುವುದು".

ತಾಯಿ ಮಾತು ಕೇಳಿದವಳು ಸರಿಯೆಂದು ತಲೆ ಆಡಿಸಿ ಅಂದಿನಿಂದ ಎಲ್ಲಾ ತರಕಾರಿ ಮತ್ತು ಹಣ್ಣುಗಳ ಇಷ್ಟ ಪಟ್ಟು ತಿನ್ನತೊಡಗಿದಳು. ಒಳ್ಳೆಯ ಆರೋಗ್ಯ ಪಡೆದಳು.

**– ಸುವರ್ಣಾ ಭಟ್ಟ.**

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

### ಇಂದು 145ನೆಯ ಜನ್ಮದಿನದ ಸವಿನೆನಪು (02–07–1880)

# ಪರಂಪರೆಯ ಹೊಂಗಣಜ : ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ

ಎರಡು ಸಾವಿರ ವರ್ಷಗಳಿಗೂ ಮಿಗಿಲಾದ ಸುದೀರ್ಘ ಹಾಗೂ ಸಮೃದ್ಧವಾದ ಕನ್ನಡ ಸಾಹಿತ್ಯ ಪರಂಪರೆ ಚಿರಂತನವಾದ, ಪ್ರಸ್ತುತವಾದ ಹಲವು ಮೌಲಿಕ ವಿಚಾರಗಳನ್ನು ಅಂತರ್ಗತವಾಗಿಸಿಕೊಂಡಿದೆ. ಕನ್ನಡ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿರುವ ಜನಪರ ಹಾಗೂ ಜೀವಪರಧೋರಣೆ, ವಿಚಾರಗಳು ವಿಶ್ವವ್ಯಾಪಕತೆಗೆ, ಸಾರ್ವಕಾಲಿಕತೆಗೆ ಕಾರಣವಾಗಿವೆ. ಇಂಥ ವಿಚಾರಗಳನ್ನು ತಲೆಮಾರಿನಿಂದ ತಲೆಮಾರಿಗೆ ದಾಟಿಸುವ ಕೆಲಸ ಅನೂಚಾನವಾಗಿ ನಡೆದುಕೊಂಡು ಬರುತ್ತಿದೆ. ಆಧುನಿಕ ಪೂರ್ವ ಸಂದರ್ಭದಲ್ಲಿ ರಚಿತವಾದ ಹಲವು ಕಾವ್ಯಗಳು, ಶಾಸ್ತ್ರಕೃತಿಗಳು ಪ್ರಾಚೀನಕಾಲದಲ್ಲಿ ತಾಡೋಲೆಗಳಲ್ಲಿ, ಕಡತಗಳಲ್ಲಿ, ಹಸ್ತಪ್ರತಿಗಳಲ್ಲಿದ್ದವು. ಅಜ್ಞಾತವಾಗಿದ್ದ ಅವುಗಳನ್ನು ಶೋಧಿಸಿ, ಸಂಗ್ರಹಿಸಿ, ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ, ಸಂಪಾದಿಸಿ ಆಧುನಿಕ ಮುದ್ರಣ ಮಾಧ್ಯಮಕ್ಕೆ ಅಳವಡಿಸಿ ಮುಂದಿನ ಪೀಳಿಗೆಗೆ ಕಾಪಿಡುವ ಹಿರಿಯತಲೆಮಾರಿನ ಹಲವು ವಿದ್ವಾಂಸರ, ಪಂಡಿತರ ಪರಿಶ್ರಮ ಸದಾಸ್ಮರಣೀಯವಾದುದು. ಈ ಕಾರ್ಯದಲ್ಲಿ ತಮ್ಮ ಜೀವಿತವನ್ನೇ ಮುಡಿಪಾಗಿಟ್ಟವರಲ್ಲಿ ಪಾಶ್ಚಾತ್ಯ ವಿದ್ವಾಂಸರಂತೆ ಸ್ಥಳೀಯ ವಿದ್ವಾಂಸರೂಕೂಡ ಸರಿದೊರೆಯಾಗಿ ಪರಿಶ್ರಮ ವಹಿಸಿ ದುಡಿದಿದ್ದಾರೆ.

'ಕನ್ನಡ ನಿಘಂಟು' ಎಂದಾಕ್ಷಣ ಜರ್ಮನಿಯ ರೆವರೆಂಡ್ ಫರ್ಡಿನೆಂಡ್ ಕಿಟ್ಟಲ್, ಶಾಸನಗಳೆಂದರೆ ಬಿ.ಎಲ್.ರೈಸ್, ಇ.ಪಿ.ರೈಸ್, 'ಮಂಗಳೂರು ಸಮಾಚಾರ' ಎಂದರೆ ಹರ್ಮನ್ ಮೊಗ್ಲಿಂಗ್, 'ಸರ್ವಜ್ಞನ ವಚನಗಳು' ಎಂದರೆ ರೆವರೆಂಡ್ ಉತ್ತಂಗಿ ಚನ್ನಪ್ಪ– ಹೀಗೆ ನೆನಪಿನ ಸುರುಳಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಹನ್ನೆರಡನೆಯ ಶತಮಾನದ ಶರಣರ ವಚನಗಳು, ವಚನ ಸಾಹಿತ್ಯ ಎಂದಕೂಡಲೇ ಡಾ.ಫ.ಗು. ಹಳಕಟ್ಟಿಯವರು ಧುತ್ ಎಂದು ಮನೋಭಿತ್ತಿಯಲ್ಲಿ ಪ್ರತ್ಯಕ್ಷರಾಗುತ್ತಾರೆ. ಅವರಿಲ್ಲದಿದ್ದರೆ ವಚನ ಸಾಹಿತ್ಯದ ಸಮಗ್ರಕಲ್ಪನೆ ಬರುವುದಕ್ಕೆ ಖಂಡಿತ ಸಾಧ್ಯವಾಗುತ್ತಿರಲಿಲ್ಲ. ಅಂತಹ ಅತ್ಯಮೂಲ್ಯವಾದ ಕೊಡುಗೆಯನ್ನು ಸಲ್ಲಿಸಿದ ಅವರ ಜನ್ಮದಿನದ ನೆನಪಿಗಾಗಿ ಈ ಲೇಖನ.

ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿಗಳ ಏಳ್ಗೆಗಾಗಿ ಸಂಪೂರ್ಣ ತಮ್ಮನ್ನು ಸಮರ್ಪಿಸಿಕೊಂಡು, ಅಹರ್ನಿಶಿ ದುಡಿದು 'ವಚನ ಪಿತಾಮಹ', 'ವಚನಶಾಸ್ತ್ರ ಪ್ರವೀಣ,"ವಚನ ಗುಮ್ಮಟ' ಎಂದೆಲ್ಲ ಖ್ಯಾತರಾದ ಸಂಶೋಧಕ, ಸಂಪಾದಕ,ಪ್ರಕಾಶಕ, ಸರಳತೆಯ ಸಭ್ಯಮೂರ್ತಿ ಹಳಕಟ್ಟಿಯವರ ಪೂರ್ಣಹೆಸರು: ಫಕೀರಪ್ಪ ಗುರುಬಸಪ್ಪ ಹಳಕಟ್ಟಿ. 145 ವರ್ಷಗಳ ಹಿಂದೆ ಎರಡು ಜುಲೈ 1880ರಂದು ಧಾರವಾಡದಲ್ಲಿ ಗುರುಬಸಪ್ಪ ಮತ್ತು ದಾನಮ್ಮ ದಂಪತಿಗಳ ಮೊದಲನೆಯ ಮಗನಾಗಿ ಹಳಕಟ್ಟಿಯವರು ಜನಿಸಿದರು. ತಂದೆಯವರು ವೃತ್ತಿಯಲ್ಲಿ ಶಾಲಾ ಶಿಕ್ಷಕರಾಗಿದ್ದರೂ ಪ್ರವೃತ್ತಿಯಲ್ಲಿ ಸಾಹಿತಿಗಳಾಗಿದ್ದರು. ಚಿಕ್ಕಂದಿನಲ್ಲಿಯೇ (05 ಜೂನ್ 1883) ತಾಯಿ ತೀರಿಕೊಂಡರು. ತಂದೆಯ ಪಾಲನೆಯಲ್ಲಿ ಬೆಳೆದರು. ತಂದೆಯವರು ಆಗಿನ ಕಾಲದ 'ವಾಗ್ಭೂಷಣ' ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಪ್ರಕಟಿಸಿದ್ದರು. 'ಇಂಗ್ಲೆಂಡಿನ ಇತಿಹಾಸ,' 'ಏಕನಾಥ ಸಾಧುಗಳ ಚರಿತ್ರೆ' ಮುಂತಾದ ಕೃತಿಗಳನ್ನು ರಚಿಸಿದ್ದರು. ಹೀಗಾಗಿ ಹಳಕಟ್ಟಿಯವರಿಗೆ ಸಾಹಿತ್ಯದ ಒಲವು ಸಹಜವಾಗಿ ಬಂದಿತ್ತೆನ್ನ ಬಹುದು. ಹಳಕಟ್ಟಿಯವರು 1896ರಲ್ಲಿ ಮ್ಯಾಟ್ರಿಕ್‌ನ್ನುಧಾರವಾಡದಲ್ಲಿ, ಪದವಿ ಶಿಕ್ಷಣವನ್ನು 1902ರಲ್ಲಿ ಮುಂಬೈನ ಕಾಲೇಜಿನಲ್ಲಿ ಪೂರೈಸಿದರು. ವಿಜ್ಞಾನದ ವಿದ್ಯಾರ್ಥಿಯಾಗಿದ್ದರೂ 1904ರಲ್ಲಿ ಕಾನೂನು ಪದವಿಯನ್ನು ಪಡೆದು ಬಿಜಾಪುರದಲ್ಲಿ ವಕೀಲಿಕೆಯನ್ನು ಪ್ರಾರಂಭಿಸಿದರು.




ಡಾ.ಬಿ.ಜಿ.ಕನಕೇಶಮೂರ್ತಿ
ವಿಶ್ರಾಂತ ಪ್ರಾಧ್ಯಾಪಕರು

Scan For Digital Colourful
HAMPI TIMES E-paper

**ವಚನ ಸಾಹಿತ್ಯ ಸಂರಕ್ಷಣೆ:** ತಂದೆಯವರ ಪ್ರೇರಣೆಯಿಂದ ವಚನ ಸಾಹಿತ್ಯದತ್ತ ಆಕರ್ಷಿತರಾದ ಹಳಕಟ್ಟಿಯವರು ರಬಕವಿಯ ಶಿವಲಿಂಗಪ್ಪ ಮಂಚಾಲೆಯವರಿಂದ ತಾಡೋಲೆಗಳ ಕಟ್ಟುಗಳನ್ನು ಕಂಡುಕುತೂಹಲ ಮೂಡಿಸಂಗ್ರಹಿಸುವ ಕೆಲಸ ಪ್ರಾರಂಭಿಸಿದರು. 'ಷಟ್‌ಸ್ಥಲತಿಲಕ,' 'ಪ್ರಭುದೇವರ ವಚನ' ಸಂಗ್ರಹಗಳ ಮೂಲಕ 1903ರಲ್ಲಿ ವಚನಗಳ ಶೋಧನೆಗೆ ತೊಡಗಿಸೈಕಲ್ ತುಳಿದು ಸುಮಾರು ಒಂದು ಸಾವಿರಕ್ಕೂ ಅಧಿಕ ತಾಡೋಲೆಯ ಕಟ್ಟುಗಳನ್ನು ಸಂಗ್ರಹಿಸಿದರು. ಗ್ರಂಥ ಸಂಪಾದನೆಯ ಶಾಸ್ತ್ರೀಯ ಚೌಕಟ್ಟಿನಲ್ಲಿ ವಚನಗಳನ್ನು ಸಾಮಾನ್ಯರಿಗೆ ತಿಳಿಯುವಂತೆ ಬಸವೇಶ್ವರರ ವಚನಗಳು(1926), ಮಹಾದೇವಿಯಕ್ಕನ ವಚನಗಳು(1927), ಸಕಲೇಶ ಮಾದರಸನ ವಚನಗಳು (1929), ಪ್ರಭುದೇವರ ವಚನಗಳು(1931), ಸಿದ್ಧರಾಮೇಶ್ವರನ ವಚನಗಳು(1932), ದೇವರ ದಾಸಿಮಯ್ಯನ ವಚನಗಳು(1939) ಇವುಗಳನ್ನು ಸಂಪಾದಿಸಿ ಪ್ರಕಟಿಸಿದ್ದಲ್ಲದೆ 1930ರಲ್ಲಿ ಗೂಳೂರು ಸಿದ್ಧವೀರಣ್ಣೊಡೆಯನ 'ಶೂನ್ಯ ಸಂಪಾದನೆ'ಯನ್ನು ಸಟೀಕಿನೊಂದಿಗೆ ಸಂಪಾದಿಸಿ ಪ್ರಕಟಿಸಿದರು. ಅಂಬಿಗರಚೌಡಯ್ಯ, ಉರಿಲಿಂಗಪೆದ್ದಿ, ಗೋರಕ್ಷ, ಮಾಚಿದೇವ, ಮಾದಾರಚನ್ನಯ್ಯ, ಲಿಂಗಮ್ಮ, ಸತ್ಯಕ್ಕ ಮೊದಲಾದ ಹಲವರ ವಚನಗಳನ್ನು ಬೆಳಕಿಗೆ ತಂದ ಶ್ರೇಯಸ್ಸು ಹಳಕಟ್ಟಿಯವರಿಗೆ ಸಲ್ಲುತ್ತದೆ. ಹರಿಹರನ ನೂರ ಇಪ್ಪತ್ತನಾಲ್ಕು ರಗಳೆಗಳನ್ನು ಎಂಟು ಭಾಗಗಳಲ್ಲಿ ಹಾಗೂ ಆದಯ್ಯನರಗಳೆಗಳು (1930)ರಲ್ಲಿ ಸಂಪಾದಿಸಿ ಪ್ರಕಟಿಸಿದರು. ಒಂದು ವಿಶ್ವವಿದ್ಯಾಲಯ ಮಾಡಬಹುದಾದ ಕೆಲಸವನ್ನು ಏಕವ್ಯಕ್ತಿಯಾಗಿ ಹಳಕಟ್ಟಿಯವರು ಮಾಡಿದರೆಂಬುದು ಮುಖ್ಯವಾದುದು. ಹೀಗೆ ಕಾಲಗರ್ಭದಲ್ಲಿ ಹುದುಗಿ ಹೋಗಿದ್ದ ವಚನ ಸಾಹಿತ್ಯವನ್ನು ಸಂರಕ್ಷಿಸಿ ಬೆಳಕಿಗೆ ತಂದವರು ಹಳಕಟ್ಟಿಯವರು.






ವಚನಗಳ ತಾತ್ವಿಕತೆ ಮತ್ತು ಸಾಹಿತ್ಯಕ ಗುಣಗಳನ್ನು ಕುರಿತಂತೆ ಅಸಂಖ್ಯಾತ ಲೇಖನಗಳನ್ನು ಹಳಕಟ್ಟಿಯವರು ಬರೆದಿದ್ದಾರೆ. ವಚನಗಳಲ್ಲದೆ, 1938ರಲ್ಲಿ ನಾಗಭೂಷಣ ಗಣಮಾತಾರಾಧ್ಯನ 'ಕೃಷಿ ವಿಜ್ಞಾನ ದೀಪಿಕೆ'ಯನ್ನು, 1939ರಲ್ಲಿ ರಾಘವಾಂಕನ' ಸೋಮನಾಥ ಚರಿತೆ' ಯನ್ನು 'ಆದಿಶೆಟ್ಟಿ ಪುರಾಣವು' ಹೆಸರಿನಲ್ಲಿಯೂ ಮತ್ತು ವಚನಗಳ ಹಿನ್ನೆಲೆಯಲ್ಲಿ ಮೂರು ಸಂಪುಟಗಳಿಂದ ಕೂಡಿದ 'ವಚನಶಾಸ್ತ್ರಸಾರ' ಎಂಬ ಬೃಹತ್ ಗ್ರಂಥವನ್ನು 1931, 1933 ಮತ್ತು 1939ರಲ್ಲಿ ಬೇರೆ ಬೇರೆ ಆವೃತ್ತಿಗಳಲ್ಲಿ ಪ್ರಕಟಿಸಿದರು. ಇದು ಹಳಕಟ್ಟಿಯವರ ಅರುವತ್ತು ವರ್ಷಗಳ ವಚನಗಳ ತಲಸ್ಪರ್ಶಿ ಅಧ್ಯಯನದ ಫಲವಾಗಿದೆ. 1943ರಲ್ಲಿ ಪ್ರಕಟಿಸಿದ 'ಶಿವಾನುಭವ ಶಬ್ದಕೋಶ' ವಚನಸಾಹಿತ್ಯದ ಕೈಗನ್ನಡಿಯಂತಿದೆ. ಇವಲ್ಲದೆ ವೀರಶೈವ ಶರಣರು, ಅರಸರು ಮೊದಲಾದವರ ಜೀವನ ಚರಿತ್ರೆಯನ್ನು ರಚಿಸಿ ಪ್ರಕಟಿಸಿದ್ದಾರೆ.

**ಪತ್ರಿಕೋದ್ಯಮ ಮತ್ತು ಶಿಕ್ಷಣಕ್ಷೇತ್ರ:** 1920ರ ಹೊತ್ತಿಗೆಒಂದು ಸಾವಿರ ವಚನಗಳ ಕಟ್ಟುಗಳು ಸಂಗ್ರಹಿತವಾದವು. ಮುದ್ರಣಕ್ಕಾಗಿ ಐದುನೂರು ರೂಪಾಯಿಗಳೊಂದಿಗೆ ಮಂಗಳೂರಿಗೆ ಹಸ್ತಪ್ರತಿಯನ್ನು ಕಳಿಸಿದರೆ ಅಲ್ಲಿ ಸಾಧ್ಯವಾಗುವುದಿಲ್ಲವೆಂದು ಪ್ರತ್ಯುತ್ತರ ಬಂತು. ಇದರಿಂದ ನಿರಾಶರಾದರೂ ಧೃತಿಗೆಡದೆ ವಚನಗಳನ್ನು ಸಂಪಾದಿಸಿ ಪ್ರಕಟಿಸುವ ಉದ್ದೇಶದಿಂದ ಸ್ವಂತ ಮನೆಯನ್ನು ಮಾರಿ, ಬಾಡಿಗೆ ಮನೆಯಲ್ಲಿದ್ದುಕೊಂಡು 1925ರಲ್ಲಿ 'ಹಿತಚಿಂತಕ ಮುದ್ರಣಾಲಯ'ದ ಸ್ಥಾಪನೆ ಮಾಡಿದರು. ಸಂಶೋಧನೆಗಳ ಪ್ರಕಟಣೆಗಾಗಿ ಮನೆಯಲ್ಲಿಯೇ ಸ್ಥಾಪಿತವಾದ ಮುದ್ರಣಾಲಯವಾದ ಇದು ಕನ್ನಡದ ಸಂದರ್ಭದಲ್ಲಿ ಅತಿವಿರಳವೆನ್ನಬಹುದು. ವಚನ ಸಾಹಿತ್ಯ ಮತ್ತುವಚನ ಸಂಸ್ಕೃತಿಯ ಪ್ರಸಾರಕ್ಕಾಗಿ 1926ರಲ್ಲಿ 'ಶಿವಾನುಭವ' ಪತ್ರಿಕೆಯನ್ನು ಪ್ರಾರಂಭ ಮಾಡಿದರು. ಮೊದಮೊದಲು ತ್ರೈಮಾಸಿಕ ಪತ್ರಿಕೆಯಾಗಿ ಪ್ರಕಟವಾಗುತ್ತಿದ್ದದ್ದು ನಂತರಮಾಸಿಕ ಪತ್ರಿಕೆಯಾಗಿ ಬದಲಾಯಿತು. 'ಶಿವಾನುಭವ ಗ್ರಂಥಮಾಲೆ'ಯಲ್ಲಿ ಎಲ್ಲಾ ಕೃತಿಗಳು ಪ್ರಕಟವಾದವು. ಸುಮಾರು ನಲವತ್ತು ವರ್ಷಗಳವರೆಗೆ 'ಶಿವಾನುಭವ ಪತ್ರಿಕೆ' ನಿರಂತರವಾಗಿ ನಡೆಯಿತು.1928ರಲ್ಲಿ 'ನವಕರ್ನಾಟಕ' ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿ ಅದರಲ್ಲಿರಾಜಕೀಯ, ಸಾಮಾಜಿಕ, ಶೈಕ್ಷಣಿಕ ಮತ್ತು ಔದ್ಯೋಗಿಕ ಲೇಖನಗಳನ್ನು ಪ್ರಕಟಿಸಿದರು. ಹಳಕಟ್ಟಿಯವರು ಶಿಕ್ಷಣ ಮತ್ತು ಬ್ಯಾಂಕಿಂಗ್ ಕ್ಷೇತ್ರಕ್ಕೆ ನೀಡಿದ ಕೊಡುಗೆಯೂ ಗಮನರ್ಹವಾದುದು. ಶಿಕ್ಷಣದ ಮಹತ್ವವನ್ನು ಅರಿತು ವೀರಶೈವ ಶಿಕ್ಷಣ ಫಂಡ್, ಬಿಜಾಪುರ ಜಿಲ್ಲಾ ವೀರಶೈವ ವಿದ್ಯಾವರ್ಧಕ ಸಂಘ (ಬಿ.ಎಲ್.ಡಿ.ಇ.ಎ.), ಕಾಯಕಯೋಗಿ ಸಿದ್ಧರಾಮೇಶ್ವರರ ಹೆಸರಿನಲ್ಲಿ ಸಿದ್ಧೇಶ್ವರ ಮಾಧ್ಯಮಿಕ ಶಾಲೆಗಳನ್ನು ಸ್ಥಾಪಿಸಿದ್ದಲ್ಲದೆ ಸಹಕಾರಿ ಕ್ಷೇತ್ರದ ಅಗತ್ಯತೆಯನ್ನು ಮನಗಂಡು ಸಿದ್ಧೇಶ್ವರ ಬ್ಯಾಂಕ್‌ನ್ನು ಸ್ಥಾಪಿಸುವಲ್ಲಿ ಹಳಕಟ್ಟಿಯವರ ಕೊಡುಗೆ ಅಮೂಲ್ಯವಾದುದು.

ಸಾಧನೆಗೆ ಸಂದಗೌರವ–ಪುರಸ್ಕಾರ:ಕನ್ನಡ ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಲ್ಲಿಸಿದ ಅಪಾರಕೊಡುಗೆಯನ್ನು ಗುರುತಿಸಿದ ಬ್ರಿಟಿಷ್ ಸರ್ಕಾರ ಅವರಿಗೆ 'ರಾವ್‌ಬಹದ್ದೂರ್' ಮತ್ತು'ರಾವ್‌ಸಾಹೇಬ್' ಎಂಬ ಬಿರುದನ್ನು ನೀಡಿ ಗೌರವಿಸಿದೆ.ಆಲೂರು ವೆಂಕಟರಾಯರು ಹಳಕಟ್ಟಿಯವರ ಸಹಪಾಠಿಯಾಗಿದ್ದರು.ಕರ್ನಾಟಕ ಏಕೀಕರಣಕ್ಕಾಗಿ ಅವರು ಮಾಡಿದ ಹೋರಾಟ ಹಳಕಟ್ಟಿಯವರಿಗೆ ಸ್ಫೂರ್ತಿಯಾಯಿತು. ಈ ಹಿನ್ನೆಲೆಯಲ್ಲಿ 1928ರಲ್ಲಿ ಮೂರನೇಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷರಾದುದು ಔಚಿತ್ಯವೇ ಸರಿ. 1933ರಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾಗಿ, ಮುಂಬೈ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ, ಧಾರವಾಡ ಕನ್ನಡ ಸಂಶೋಧನಾ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. 1953ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಡಿ.ಲಿಟ್. ಪದವಿಯನ್ನು ನೀಡಿ ಗೌರವಿಸಿದೆ. 1926ರಲ್ಲಿ ಬಳ್ಳಾರಿಯಲ್ಲಿ ನಡೆದ ಹನ್ನೆರಡನೇ ಅಖಿಲ ಕನ್ನಡ ಸಾಹಿತ್ಯಸಮ್ಮೇಳನದ ಅಧ್ಯಕ್ಷರಾಗಿದ್ದರು. 1910ರಲ್ಲಿ ಸ್ಥಾಪಿಸಿದ ಬಿಜಾಪುರ ಲಿಂಗಾಯತ ವಿದ್ಯಾವರ್ಧಕ ಸಂಘ ಹೆಸರುವಾಸಿಯಾದುದು. 'ಇಂಡಿಯನ್‌ಆಂಟಿಕ್ವೆರಿ' ಯಲ್ಲಿ ಬಸವಣ್ಣನವರ ವಚನಗಳು ಇಂಗ್ಲಿಷ್‌ಗೆಅನುವಾದವಾಗುವಲ್ಲಿ ಹಳಕಟ್ಟಿಯವರ ಪಾತ್ರ ಪ್ರಮುಖವಾದುದಲ್ಲದೆಅವನ್ನುಗಾಯನಕ್ಕೂಅಳವಡಿಸುವ ವ್ಯವಸ್ಥೆ ಮಾಡಿದರು.ವಚನಸಾಹಿತ್ಯಸಂಪಾದನೆ ಮತ್ತು ಹಳಕಟ್ಟಿ ಎರಡೂ ಅವಿನಾಭಾವ ಸಂಬಂಧವನ್ನುಳ್ಳವು. ಒಂದನ್ನು ಹೊರತುಪಡಿಸಿ ಇನ್ನೊಂದನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ತಮ್ಮಜೀವಿತವನ್ನೇ ವಚನ ಸಾಹಿತ್ಯಕ್ಕಾಗಿ ಸಮರ್ಪಿಸಿಕೊಂಡ, ಸರಳ, ಸ್ಥಿತಪ್ರಜ್ಞತೆಯ ಮನೋಭಾವದ ಹಳಕಟ್ಟಿಯವರು ತಮ್ಮ ಎಂಬತ್ತ ಮೂರನೆಯ ವಯಸ್ಸಿನಲ್ಲಿ 29 ಜೂನ್ 1964ರಲ್ಲಿ ಭೌತಿಕವಾಗಿ ವಿಧಿವಶರಾದರು. ಬಿ.ಎಂ.ಶ್ರೀ.ಅವರ ಮಾತಿನಲ್ಲಿ ಅವರೊಂದು 'ವಚನ ಗುಮ್ಮಟ'ವೇ ಸರಿ.

ವಚನ ಸಾಹಿತ್ಯ ಸಂರಕ್ಷಣೆಗೆ ಹಳಕಟ್ಟಿಯವರು ಸಲ್ಲಿಸಿದ ಸೇವೆ ಸದಾ ಸ್ಮರಣೀಯವಾದುದು. ಹಳಕಟ್ಟಿಯವರು ಆತ್ಮಕತೆಯನ್ನು ಬರೆದುಕೊಂಡಿದ್ದರು. ಡಾ. ಎಂ.ಎಂ. ಕಲಬುರ್ಗಿ ಮತ್ತು ಎಸ್.ಆರ್. ಗುಂಜಾಳ ಅವರು 2008ರಲ್ಲಿ ಸಂಗ್ರಹಿಸಿ ಧಾರವಾಡದ ಬಸವತತ್ವ ಪ್ರಚಾರ ಸಂಸ್ಥೆಯ ಮೂಲಕ ಪ್ರಕಟಿಸಿದ್ದಾರೆ. ಹಳಕಟ್ಟಿಯವರ ಸಮಗ್ರ ಸಾಹಿತ್ಯವನ್ನು ಡಾ.ಎಂ.ಎಂ.ಕಲಬುರ್ಗಿಯವರ ನೇತೃತ್ವದಲ್ಲಿ ಹದಿನೈದು ಸಂಪುಟಗಳಲ್ಲಿ ಹೊರತರಲಾಗಿದೆ. ಬಿಜಾಪುರದಲ್ಲಿ ಹಳಕಟ್ಟಿಯವರ ಹೆಸರಿನಲ್ಲಿ ಸ್ಮಾರಕ ಭವನವನ್ನು ನಿರ್ಮಿಸಿದ್ದು ಸಂಶೋಧನಾ ಮತ್ತು ಅಧ್ಯಯನ ಕೇಂದ್ರವನ್ನು ನಡೆಸಲಾಗುತ್ತಿದೆ. ಅವರು ಅಡಿಗಲ್ಲಿಟ್ಟು ಹುಟ್ಟುಹಾಕಿದ ಸಂಸ್ಥೆಗಳು ಇಂದು ಹೆಮ್ಮರವಾಗಿ ಬೆಳೆದಿವೆ. ಹಳಕಟ್ಟಿಯವರ ಹೆಸರಿನ ಫೌಂಡೇಶನ್ ವತಿಯಿಂದ ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ ಪ್ರತಿವರ್ಷ ಅವರ ಹೆಸರಿನಲ್ಲಿ 'ರಾಷ್ಟ್ರೀಯಪ್ರಶಸ್ತಿ'ಯನ್ನು ನೀಡಲಾಗುತ್ತಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಹಳಕಟ್ಟಿಯವರ ದತ್ತಿನಿಧಿಯನ್ನು ಸ್ಥಾಪಿಸಲಾಗಿದ್ದು ವಿಶೇಷ ಉಪನ್ಯಾಸ, ತರಬೇತಿ ಕಾರ್ಯಾಗಾರ, ಕಮ್ಮಟ ಮೊದಲಾದ ಹಲವು ಮೌಲಿಕ ಕಾರ್ಯ ಯೋಜನೆಗಳನ್ನು ನಿರಂತರವಾಗಿ ನಡೆಸಲಾಗುತ್ತಿದೆ. ಕರ್ನಾಟಕ ಸರ್ಕಾರ ಕಳೆದ ಮೂರು ವರ್ಷಗಳಿಂದ ಡಾ.ಫ.ಗು.ಹಳಕಟ್ಟಿಯವರ ಜನ್ಮದಿನವನ್ನು 'ವಚನಸಾಹಿತ್ಯ ಸಂರಕ್ಷಣಾ ದಿನ'ವನ್ನಾಗಿ ಅರ್ಥಪೂರ್ಣವಾಗಿ ಆಚರಿಸುತ್ತಿರುವುದು ಶ್ಲಾಘನೀಯ ವಿಚಾರವಾಗಿದೆ.

**ವೀಣಾ ಹೇಮಂತ್ ಗೌಡ ಪಾಟೀಲ್ ಮುಂಡರಗಿ ಗದಗ್**

# ಸೋತು ಗೆದ್ದವರು



ನಾನು ನೂರಾರು ಬಾರಿ ಸೋತೆ. ಜನ ನನ್ನನ್ನು ನೋಡಿ ನಗುತ್ತಿದ್ದರು ಅಂತಿಮವಾಗಿ ಚಾಕ್ಲೆಟ್ ನನ್ನ ಬದುಕನ್ನು ಬದಲಾಯಿಸಿತು.

ನನ್ನ ತಂದೆ ಬಹುದೊಡ್ಡ ಕನಸುಗಾರ. ದೊಡ್ಡ ದೊಡ್ಡ ಯೋಜನೆಗಳನ್ನು ರೂಪಿಸುತ್ತಿದ್ದ ನನ್ನ ತಂದೆ ಆದರೆ ಅದರ ಪರಿಣಾಮ ಮಾತ್ರ ಶೂನ್ಯವಾಗಿರುತ್ತಿತ್ತು. ನಮ್ಮ ಬೆರಳ ತುದಿಯಲ್ಲಿನ ಅವಕಾಶಗಳು ಕೈ ತಪ್ಪಿ ಹೋಗುವುದನ್ನು ನಾನು ನೋಡುತ್ತಲೆ ಬೆಳೆದೆ.

ನಾನು ನಾಲ್ಕನೇ ತರಗತಿಯಲ್ಲಿ ಇದ್ದಾಗ ಶಾಲೆಯಿಂದ ನನ್ನನ್ನು ಹೊರಗೆ ಹಾಕಿದರು. ಮಾಡಲು ಬೇರೆ ಏನೂ ಕೆಲಸವಿರಲಿಲ್ಲ... ಆದರೆ ನನ್ನೊಳಗಿನ ಸುಪ್ತ ಮನಸ್ಸು ನನಗೆ ನೀನು ಸೋಲಲು ಹುಟ್ಟಿಲ್ಲ,ಒಂದಲ್ಲ ಒಂದು ದಿನ ನೀನು ಗೆದ್ದೇ ಗೆಲ್ಲುವೆ ಎಂದು ಸದಾ ಪಿಸುಗುಡುತ್ತಿತ್ತು ಎಂದು ಮುಂದೆ ತನ್ನ ಯಶಸ್ಸಿನ ಅಂತಿಮ ತುದಿಯಲ್ಲಿ ಇದ್ದಾಗ ಹೇಳಿದ ವ್ಯಕ್ತಿ ಮಿಲ್ಟನ್ ಹರ್ಷಿ ಮುಂದೆ ಬದುಕಿನಲ್ಲಿ ಅದ್ಭುತ ಯಶಸ್ಸನ್ನು ಕಂಡ ಕನಸು ಕಂಗಳ ಬಹುದೊಡ್ಡ ಚಾಕಲೇಟ್ ಉದ್ಯಮಿ. ತನ್ನ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಹಲವಾರು ಏಳು ಬೀಳುಗಳನ್ನು ಕಂಡರೂ ನಿರಂತರ ಪ್ರಯತ್ನವನ್ನು ಮುಂದುವರಿಸಿ ಬದುಕಿ ನಲ್ಲಿ ಯಶಸ್ವಿಯಾದಾತ. ಆತನ ಜೀವನದ ಕಥೆ ಅತ್ಯದ್ಭುತ, ಪ್ರೇರಣಾದಾಯಿಯಾದದ್ದು ಕೂಡ.

18ರ ವಯಸ್ಸಿನಲ್ಲಿ ಆತ ತನ್ನ ಮೊಟ್ಟ ಮೊದಲ ಕ್ಯಾಂಡಿ ಶಾಪ್ ತೆರೆದ ಆದರೆ ವ್ಯವಹಾರ ಪ್ರಜ್ಞೆಯ ಕೊರತೆಯಿಂದ ವಿಫಲನಾದ. ಮತ್ತೆ ಮತ್ತೆ ಪ್ರಯತ್ನಿಸಿದ್ರೂ ವಿಫಲನಾದ ಆತ ತನ್ನ ಸಂಪೂರ್ಣ ಬಂಡವಾಳವನ್ನು ಕೂಡ ಕಳೆದುಕೊಂಡ. ಖಾಲಿ ಕೈಯಲ್ಲಿ ಮರಳಿದ ಆತನಿಗೆ ಕುಟುಂಬದ ಸೋಲಿನ ಖ್ಯಾತಿಯನ್ನು ಮುಂದುವರೆಸಿದ ಎಂಬ ಮಾತು ಮಾತ್ರ ಕೇಳಬಂತು. ಜನರು ಆತನನ್ನು ನಂಬುವುದನ್ನು ಬಿಟ್ಟುಬಿಟ್ಟರು.ಆತನು ಕೂಡ ಜನರ ಕುರಿತು ಯೋಚಿಸುವುದನ್ನು. ಆದರೆ ಜನರ ಮಾತುಗಳಿಗೆ ಆತ ಕಿವಿಗೊಡಲಿಲ್ಲ.... ಮುಖ್ಯವಾಗಿ ಆತ ತನ್ನ ಮೇಲಿನ ನಂಬಿಕೆಯನ್ನು, ಆತ್ಮವಿಶ್ವಾಸ ವನ್ನು ಕಳೆದುಕೊಳ್ಳಲಿಲ್ಲ

ವರ್ಷಗಳ ನಂತರ ಆತ ಮತ್ತೊಂದು ಬಾರಿ ಹೊಸದೊಂದು ಕ್ಯಾಂಡಿ ಚಾಕ್ಲೇಟ್ಗಳ ವ್ಯವಹಾರವನ್ನು ಆರಂಭಿಸಿದ. ಪೆನ್ಸಿಲ್ವೇನಿಯಾ ರಾಜ್ಯದ ಲಾಂಚೆಸ್ಟರ್ ನಲ್ಲಿ ಆತ ಆರಂಭಿಸಿದ ಕ್ಯಾಂಡಿಗಳ ಉದ್ಯಮ ತುಂಬಾ ಚೆನ್ನಾಗಿ ನಡೆದು ಆತನ ಕೈ ಹಿಡಿಯಿತು. ಇಲ್ಲಿ ಆತ ಹೊಸದೊಂದು ಸಂಶೋಧನೆಯನ್ನು ಮಾಡಿದ್ದ. ಜಾತ್ರೆಯೊಂದರಲ್ಲಿ ಹಾಲಿನಿಂದ ಚಾಕಲೇಟನ್ನು ತಯಾರಿಸಿ ಮಾರಿದ್ದ ಆತ ಚಾಕಲೇಟು ಉದ್ಯಮಕ್ಕೆ ಹೊಸದೊಂದು ಭವಿಷ್ಯವನ್ನು ರೂಪಿಸಿದ್ದ.

ಇದೀಗ ಆತ ತನ್ನ ಮೊದಲಿನ ಕಂಪನಿಯನ್ನು ಮಾರಿ ಮತ್ತೆ ಹೊಸದಾಗಿ ಉದ್ಯಮವನ್ನು ಆರಂಭಿಸಿದ. ಈ ಬಾರಿ ಆತ ಬಳಸಿದ್ದು ಕೋಕೋ ಪುಡಿಯನ್ನು. ಈ ರೀತಿ ಹರ್ಷಿ ಕಂಪನಿಯು ಬೆಳೆಯಿತು. ಅಮೆರಿಕಾದಾದ್ಯಂತ ತನ್ನ ಉದ್ಯಮವನ್ನು ವಿಸ್ತರಿಸಿದ ಆತ ಜಗತ್ತಿನೆಲ್ಲೆಡೆ ಅದು ಪಸರಿಸುವಂತೆ ಮಾಡಿದ.

ಪ್ರತಿ ಬಾರಿಯೂ ಆತ ಹೊಸದಾಗಿ ಉದ್ಯಮವನ್ನು ಆರಂಭಿಸಿದಾಗ ಜನ ಆತನನ್ನು ಹುಚ್ಚ, ತಲೆತಿರುಕ ಎಂದು ತಮಾಷೆ ಮಾಡಿದರು... ಆದರೆ ಆತನಿಗೆ ಮಾತ್ರ ಗೊತ್ತಿತ್ತು ತಾನು ಒಂದಲ್ಲ ಒಂದು ದಿನ ತನ್ನ ಕೆಲಸದಲ್ಲಿ ಯಶಸ್ಸನ್ನು ಕಂಡೆ ಕಾಣುತ್ತೇನೆ ಎಂದು.

ಇದೀಗ ಆತ ಕೇವಲ ಚಾಕಲೇಟ್ ಫ್ಯಾಕ್ಟರಿಯನ್ನು ಮಾತ್ರ ನಿರ್ಮಿಸಲಿಲ್ಲ ಬದಲಾಗಿ ತನ್ನ ಚಾಕಲೇಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವ ಉದ್ಯೋಗಿಗಳು ಗೌರವಯುತವಾಗಿ ತಲೆಯೆತ್ತಿ ಬಾಳುವಂತಹ ಒಂದು ಊರನ್ನೇ ನಿರ್ಮಿಸುವ ದೊಡ್ಡ ಕನಸನ್ನು ಕಂಡಿದ್ದ. ಏನೂ ಇಲ್ಲದೆ ಬದುಕುವ ನೋವನ್ನು ಖುದ್ದು ಅನುಭವಿಸಿದ್ದ ಆತ ಯಾವುದೇ ಮನುಷ್ಯನಾಗಿರಲಿ ಗೌರವಯುತ ಜೀವನ ನಡೆಸಲಿ ಎಂದು ಕಾತರಿಸಿದ್ದ. ಇಡೀ ಜಗತ್ತಿಗೆ ಆತ ಚಾಕಲೇಟ್ ಕೊಡುವ ಮುನ್ನ ಬದುಕು ಆತನಿಗೆ ಮಣ್ಣು ತಿನ್ನಿಸಿತ್ತು... ಆದರೂ ಕೂಡ ಆತ ಸಿಹಿಯಾದ ಚಾಕ್ಲೇಟ್ ತಯಾರಿಸುವುದನ್ನು ಕೈ ಬಿಡಲಿಲ್ಲ.

ನೀನು ಸೋತೆ ಎಂಬ ಕಾರಣಕ್ಕಾಗಿ ನೀನು ಕೈಗೊಂಡ ಕೆಲಸಗಳನ್ನು ಬಿಡಬೇಡ. ನೀನು ನಿನ್ನನ್ನು ನಂಬದೇ ಹೋದಾಗ ಮಾತ್ರ ನಿನ್ನ ಕೆಲಸವನ್ನು ಕೈಬಿಡು ಎಂದು ಆತನ ಅಂತಃಸಾಕ್ಷಿ ಆತನಿಗೆ ಒತ್ತಿ ಹೇಳುತ್ತಿತ್ತು.

ಅಂತೆಯೇ ತನ್ನ ಆತ್ಮಸಾಕ್ಷಿಯ ಕರೆಗೆ ಓಗೊಟ್ಟ ಆತ ಮುಂದೆ ಜಗತ್ತಿನ ಪ್ರಖ್ಯಾತ ಚಾಕಲೇಟ್ ಕಂಪನಿಗಳಲ್ಲಿ ಒಂದಾದ ಹರ್ಷಿಸ್ ಚಾಕಲೇಟು ಉದ್ಯಮಿಯಾದ. ಅತಿ ದೊಡ್ಡ ಚಾಕಲೇಟ್ ಬ್ರಾಂಡ್ ಅನ್ನು ಉತ್ಪಾದಿಸಿದ ಆತ ಜಗತ್ತಿನ ಕೆಲವೇ ಕೆಲವು ಯಶಸ್ವಿ ಉದ್ಯಮಿಗಳಲ್ಲಿ ಒಬ್ಬನಾದ.

ಹೌದಲ್ಲವೇ ಸ್ನೇಹಿತರೆ, ಯಾವ ವಸ್ತು, ವಿಷಯಗಳು ಇಂದು ಬದುಕನ್ನು ಹಾಳು ಮಾಡಬಲ್ಲದು ಎಂದು ನಾವು ಯೋಚಿಸುತ್ತೇ ವೆಯೋ ಅದು ನಮ್ಮ ಮುಂದಿನ ಬದುಕಿನ ಕನಸುಗಳ ಸಾಕಾರ ರೂಪವಾಗಬಹುದು. ಇಲ್ಲವೇ ಉನ್ನತ ಬದುಕಿಗೆ ಭದ್ರಬುನಾದಿಯನ್ನು ಹಾಕಬಹುದು.

ನದಿಯು ತನ್ನ ಉಗಮ ಸ್ಥಾನದಲ್ಲಿ ನಲ್ಲಿಯಂತೆ ಸಣ್ಣದಾಗಿ ಹರಿಯುವುದನ್ನು ನೋಡಿದಾಗ ಇದು ಮುಂದೆ ದೊಡ್ಡ ನದಿಯಾಗಿ ಸುತ್ತಲಿನ ಜಾಗವನ್ನು ತನ್ನ ಒಡಲಲ್ಲಿ ತುಂಬಿಕೊಂಡು ಬೆಟ್ಟ ಗುಡ್ಡಗಳನ್ನು ಹಾಯ್ದು ಕಣಿವೆಗಳಲ್ಲಿ ಇಳಿದು ಅಗಾಧ ಭೂಪ್ರದೇಶವನ್ನು ಆಕ್ರಮಿಸಿಕೊಂಡು ಬೆಳೆಯುತ್ತದೆ, ಮುಂದೆ ಹರಿಯುತ್ತದೆ ಎಂಬುದನ್ನು ಯಾರೂ ಊಹಿಸಲು ಸಾಧ್ಯವಿಲ್ಲ.ನದಿಯ ನಿರಂತರ ಪ್ರವಾಹ ನಮ್ಮ ಬದುಕಿನಂತೆಯೇ ಎಲ್ಲ ಏರಿಳಿತಗಳನ್ನು ಹಾಯ್ದು ತನ್ನ ಗಮ್ಯವನ್ನು ಸೇರುವಲ್ಲಿಗೆ ಮುಕ್ತಾಯವಾಗುತ್ತದೆ.

ಸದಾ ಮುಂದಿನ ಬದುಕಿನ ಕುರಿತು ಚಿಂತೆ ಕಳವಳವನ್ನು ವ್ಯಕ್ತಪಡಿಸುವ ಬದಲು ಇರುವುದನ್ನು ಸ್ವೀಕರಿಸಿ ಧೈರ್ಯಗೆಡದೆ ಮುನ್ನುಗ್ಗಿದ ವ್ಯಕ್ತಿ ಬದುಕಿನಲ್ಲಿ ಯಶಸ್ಸನ್ನು ಸಾಧಿಸುತ್ತಾನೆ. ಅಂತಹ ಯಶಸ್ಸನ್ನು ಗಳಿಸಲು ಅಪಾರ ತಾಳ್ಮೆ ಮತ್ತು ಶ್ರದ್ಧೆ ಅತ್ಯವಶ್ಯಕ. ನಿರಂತರ ಪ್ರಯತ್ನವು ಇದಕ್ಕೆ ಜೊತೆಗೂಡಿದರೆ ಯಶಸ್ಸು ಖಂಡಿತ. ಅಂತಹ ಶ್ರದ್ಧೆ ತಾಳ್ಮೆ ಮತ್ತು ಅಪರಿಮಿತ ಪ್ರಯತ್ನಗಳು ನಮ್ಮದಾಗಲಿ ಎಂದು ಆಶಿಸುವ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

**ಕವಿ ಮನಸು**

## ಬೆಳಕಿನ ಕಿರಣ

ಕವಿದಿದೆ ಮಾಯೆಯ ಕಾರ್ಗತ್ತಲು
ಬೆಳಕಿನ ಕಿರಣವು ತೂರಿಬರಲು
ಜ್ಞಾನದ ಹಣತೆಯು ಬೆಳಗಲು
ಅಜ್ಞಾನದ ಅಂದಕಾರ ಅಳಿಯಲು

ಮರೆಯಾಗಲಿ ಆಸೆ ವ್ಯಾಮೋಹ
ಕೊನೆಯಾಗಲಿ ಅರಿಷಡ್ವರ್ಗಗಳ ದಾಹ
ಅರಿಯಲಿ ಆತ್ಮವ ಈ ದೇಹ
ನಡೆಸೋಣ ಸಾಧನೆಯ ದಾಸೋಹ

**– ಚೇತನ ಭಾರ್ಗವ**
**ಅರಮನೆತೋಟ**

## ಭಾಗ್ಯೋದಯ..

ಈ ಸೂರ್ಯೋದಯ
ಇಂದು ನವಬಾಳ ಭಾಗ್ಯೋದಯ
ಸಖ ಸಖ್ಯ ಬಲು ಮುಖ್ಯ
ಇನಿಯ ಬರುವ ದಿವಸ॥

ಕೂಡಿ ಬಂದ ಈ ಭಾಗ್ಯ, ಸೌಭಾಗ್ಯ
ಒಂದಾಗಿ ಬೆರೆಯುವಂತೆ
ಸವಿರುಚಿ ಅತಿ ರುಚಿ
ಮನದೇ ಸವಿವ ಸಮಯ

ಜೋಡಿ ಹಕ್ಕಿ ನಾವಾಗಿ ಜೊತೆಯಾಗಿ
ಬಾನೇರಿ ಕಳೆವ ಸಮಯ
ಇನಿಯನ ಗೆಳೆತನ
ಹಿತದ ಮಧುರ ಮಿಲನ

ಮೂಡಿ ಚಂದ್ರ ಬಾನಲ್ಲಿ
ನಗು ಚೆಲ್ಲಿ
ನವಿರಾದ ಭಾವ ತಂದ
ತಿಂಗಳ ಬೆಳಕಲಿ
ನಲಿವು ಒಲವು ನಲಿವು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

# ಮುಂಗಾರು ಹಂಗಾಮಿಗೆ ತುಂಗಭದ್ರಾ ವಿವಿಧ ಕಾಲುವೆಗಳಿಗೆ ನೀರು ಹರಿಸಲು ನಿರ್ಧಾರ

## ಒಳ ಹರಿವಿನ ಪ್ರಮಾಣದಲ್ಲಿ ಕೊರತೆ ಉಂಟಾದಲ್ಲಿ ಪರಿಷ್ಕೃತ ಪಟ್ಟಿ ಪ್ರಕಟಿಸಲಾಗುವುದು : ಸದಸ್ಯ ಕಾರ್ಯದರ್ಶಿ ಎಲ್ ಬಸವರಾಜ್

■ **ಹಂಪಿ ಟೈಮ್ಸ್ ಕೊಪ್ಪಳ**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ 2025–26ನೇ ಸಾಲಿನ 124ನೇ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ ಮುಂಗಾರು ಹಂಗಾಮಿಗೆ ಜಲಾಶಯದಲ್ಲಿ ಲಭ್ಯವಾಗಬಹುದಾದ ನೀರಿನ ಪ್ರಮಾಣವನ್ನು ಅಂದಾಜಿಸಿ ವಿವಿಧ ಕಾಲುವೆಗಳಿಗೆ ನೀರು ಹರಿಸಲು ನಿರ್ಧರಿಸಲಾಗಿರುತ್ತದೆ.

ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಗೆ ಜುಲೈ 2 ರಿಂದ ಜು. 15ರ ವರೆಗೆ ಸರಾಸರಿ 2000 ಕ್ಯೂಸೆಕ್ಸ್ ನಂತೆ, ಜು. 16 ರಿಂದ ಜು. 31ರ ವರೆಗೆ 3000 ಕ್ಯೂಸೆಕ್ಸ್ ನಂತೆ ಮತ್ತು ಆಗಸ್ಟ್ 1 ರಿಂದ ನವೆಂಬರ್ 30ರ ವರೆಗೆ 4100 ಕ್ಯೂಸೆಕ್ಸ್‌ನಂತೆ ಅಥವಾ ಈ ಕಾಲುವೆಯಡಿ ನೀರು ಲಭ್ಯತೆಯು ಇರುವವರೆಗೆ ಮಾತ್ರ ನೀರು ಹರಿಸಲು ನಿರ್ಧರಿದ್ದು, ಇದರಲ್ಲಿ ಯಾವುದು ಮೊದಲು ಅದು ಅನ್ವಯಿಸುತ್ತದೆ.

ತುಂಗಭದ್ರಾ ಬಲದಂಡೆ ಮೇಲ್ಮಟ್ಟದ ಕಾಲುವೆಗೆ ಜು. 10 ರಿಂದ ಜು. 31ರ ವರೆಗೆ ಸರಾಸರಿ 700 ಕ್ಯೂಸೆಕ್ಸ್ ನಂತೆ ಮತ್ತು ಆಗಸ್ಟ್ 1 ರಿಂದ ನವೆಂಬರ್ 30ರ ವರೆಗೆ 1300 ಕ್ಯೂಸೆಕ್ಸ್‌ನಂತೆ ಅಥವಾ ಈ ಕಾಲುವೆಯಡಿ ನೀರು ಲಭ್ಯತೆಯು ಇರುವವರೆಗೆ ಮಾತ್ರ ನೀರು ಹರಿಸಲು ನಿರ್ಧರಿದ್ದು, ಇದರಲ್ಲಿ ಯಾವುದು ಮೊದಲು ಅದು ಅನ್ವಯಿಸುತ್ತದೆ.

ತುಂಗಭದ್ರಾ ಬಲದಂಡೆ ಕೆಳಮಟ್ಟದ ಕಾಲುವೆಗೆ ಜು. 10 ರಿಂದ ಜು. 31 ರವರೆಗೆ ಸರಾಸರಿ 500 ಕ್ಯೂಸೆಕ್ಸ್ ನಂತೆ ಮತ್ತು ಆಗಸ್ಟ್ 1 ರಿಂದ ನವೆಂಬರ್ 30ರ ವರೆಗೆ 650 ಕ್ಯೂಸೆಕ್ಸ್‌ನಂತೆ ಅಥವಾ ಈ ಕಾಲುವೆಯಡಿ ನೀರು ಲಭ್ಯತೆಯು ಇರುವವರೆಗೆ ಮಾತ್ರ ನೀರು ಹರಿಸಲು ನಿರ್ಧರಿದ್ದು, ಇದರಲ್ಲಿ ಯಾವುದು ಮೊದಲು ಅದು ಅನ್ವಯಿಸುತ್ತದೆ.

ರಾಯ ಬಸವಣ್ಣ ಕಾಲುವೆಗೆ ಜೂನ್ 1 ರಿಂದ ನವೆಂಬರ್ 30ರ ವರೆಗೆ ಸರಾಸರಿ 220 ಕ್ಯೂಸೆಕ್ಸ್‌ನಂತೆ ಅಥವಾ ಈ ಕಾಲುವೆಯಡಿ ನೀರು ಲಭ್ಯತೆಯು ಇರುವವರೆಗೆ ಮಾತ್ರ ನೀರು ಹರಿಸಲು ನಿರ್ಧರಿದ್ದು, ಇದರಲ್ಲಿ ಯಾವುದು ಮೊದಲು ಅದು ಅನ್ವಯಿಸುತ್ತದೆ.



ತುಂಗಭದ್ರಾ ಎಡದಂಡೆ ಮೇಲ್ಮಟ್ಟದ ಕಾಲುವೆಗೆ ಜುಲೈ 1 ರಿಂದ 25 ಕ್ಯೂಸೆಕ್ಸ್‌ನಂತೆ ಅಥವಾ ಜಲಾಶಯದ ನೀರಿನ ಮಟ್ಟ 1585 ಅಡಿಗಳವರೆಗೆ ನೀರು ಹರಿಸಲು ನಿರ್ಧರಿದ್ದು, ಇದರಲ್ಲಿ ಯಾವುದು ಮೊದಲು ಅದು ಅನ್ವಯಿಸುತ್ತದೆ. ನದಿಗೆ ಪೂರಕ ಸುಮಾರು 150 ಕ್ಯೂಸೆಕ್ಸ್‌ನಂತೆ ನದಿ ಪೂರಕಕಾರ್ಖಾನೆ ಒಳಗೊಂಡಂತೆ ನೀರು ಹರಿಸಲು ನಿರ್ಧರಿದ್ದು, ನೀರಿನ ಲಭ್ಯೆತೆಯನ್ನು ಆಧರಿಸಿ ನಿಂತ ಬೆಳಗಳನ್ನು ಸಂರಕ್ಷಿಸಲಾಗುವುದು.

ರೈತ ಭಾಂದವರಲ್ಲಿ ಮನವಿ: ತುಂಗಭದ್ರಾ ಜಲಾಶಯದಲ್ಲಿ ಲಭ್ಯವಿರುವ ನೀರನ್ನು ಮಿತವ್ಯಯವಾಗಿ ಬಳಸಿ ಅಧಿಕೃತ ಅಚ್ಚುಕಟ್ಟು ಪ್ರದೇಶದಲ್ಲಿ ನಿಗಧಿತ ಬೆಳೆಗಳನ್ನು ಮಾತ್ರ ಬೆಳೆಯಲು ಹಾಗೂ ಸಮರ್ಪಕ ನೀರು ನಿರ್ವಹಣೆಗೆ ಇಲಾಖೆಯೊಡನೆ ಸಹಕರಿಸಲು ರೈತ ಭಾಂದವರಲ್ಲಿ ಕೋರಲಾಗಿದೆ. ರೈತರು ಅನಧಿಕೃತವಾಗಿ ನೀರು ಪಡೆದು ಭತ್ತ/ಇತರೆ ಬೆಳೆಗಳನ್ನು ಬೆಳೆದಲ್ಲಿ ನೀರಾವರಿ ಕಾಯ್ದೆಯನ್ವಯ ಕಾನೂನು ಕ್ರಮ ಜರುಗಿಸಲಾಗುವುದು.



ಪ್ರಸಕ್ತ ಸಾಲಿನ 223ನೇ ತುಂಗಭದ್ರಾ ಮಂಡಳಿ ಸಭೆಯಲ್ಲಿ ಜಲಾಶಯದಲ್ಲಿ 80 ಟಿ.ಎಂ.ಸಿ ಯಷ್ಟು ನೀರನ್ನು ಮಾತ್ರ ಸಂಗ್ರಹಣೆ ಮಾಡಲು ನಿರ್ದರಿಸಿರುವುದರಿಂದ ಹಾಗೂ ಪ್ರಸ್ತುತ ತುಂಗಭದ್ರಾ ಜಲಾಶಯಕ್ಕೆ ಮುಂಬರುವ ದಿನಗಳಲ್ಲಿ ಹರಿದು ಬರುವ ಒಳಹರಿವಿನ ಪ್ರಮಾಣದ ಮೇಲೆ ಆವಲಂಭಿತವಾಗಿದ್ದು, ಮುಂದೆ ಒಳ ಹರಿವಿನ ಪ್ರಮಾಣದಲ್ಲಿ ಕೊರತೆ ಉಂಟಾದಲ್ಲಿ ಪರಿಷ್ಕೃತ ಪ್ರಕಟಣೆಯನ್ನು ಪ್ರಕಟಿಸಲಾಗುವುದು ಎಂದು ತುಂಗಭದ್ರಾ ಯೋಜನಾ ವೃತ್ತ ಮುನಿರಾಬಾದ್‌ನ ಅಧೀಕ್ಷಕ ಅಭಿಯಂತರರು ಹಾಗೂ ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ ನೀರಾವರಿ ಸಲಹಾ ಸಮಿತಿ ಸದಸ್ಯ ಕಾರ್ಯದರ್ಶಿ ಎಲ್.ಬಸವರಾಜ್ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ

HAMPI TIMES
Print & Digital Kannada Daily

ಈ ಬಾರಿ ಫಲಿತಾಂಶ ನಮ್ಮದೆ

ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ

ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕೆ ಸಹಕಾರ ಇರಲಿ

ಪ್ರಿಯ ಗ್ರಾಮಸ್ಥರೇ, ವಾರ್ಡ್ ನಿವಾಸಿಗಳೇ,
ಶಿಕ್ಷಣ ಪ್ರೇಮಿಗಳೇ, ಜನಪ್ರತಿನಿಧಿಗಳೇ....

ನಾವೆಲ್ಲರೂ ನಮ್ಮ ಮಕ್ಕಳ ಭವಿಷ್ಯದ ಬಗ್ಗೆ ಕನಸು ಕಾಣುತ್ತೇವೆ, ಅವರ ಸಾಧನೆಯಲ್ಲಿ ಹೆಮ್ಮೆ ಪಡುತ್ತೇವೆ. ಆ ಕನಸುಗಳನ್ನು ನನಸಾಗಿಸಲು, ಆ ಹೆಮ್ಮೆಯನ್ನು ಹೆಚ್ಚಿಸಲು ಇದೀಗ ನಮಗೆ ಒಂದು ಸುವರ್ಣಾವಕಾಶ ಸಿಕ್ಕಿದೆ.
**'ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ'** - ಇದು ಕೇವಲ ಘೋಷಣೆಯಲ್ಲ, ನಮ್ಮ ಮಕ್ಕಳ ಭವಿಷ್ಯವನ್ನು ರೂಪಿಸುವ ಒಂದು ಮಹತ್ತರ ಹೆಜ್ಜೆ. ನಮ್ಮೂರ, ನಮ್ಮ ವಾರ್ಡಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ನಮ್ಮ ಆಸ್ತಿ. ಅವರು ಉತ್ತಮ ಅಂಕ ಗಳಿಸಿ, ಉನ್ನತ ಶಿಕ್ಷಣ ಪಡೆದು, ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಬೆಳೆಯಲು ನಮ್ಮೆಲ್ಲರ ಸಹಕಾರ ಅತ್ಯಗತ್ಯ.

ವಿದ್ಯಾರ್ಥಿಗಳ ಭವಿಷ್ಯಕ್ಕೆ ಮುನ್ನುಡಿ ಬರೆಯುವುದು ಹೇಗೆ?

**ಬಹಳ ಸರಳ! ನಿಮ್ಮ ಗ್ರಾಮದ, ನಿಮ್ಮ ವಾರ್ಡಿನ ಎಸ್‌ಎಸ್‌ಎಲ್‌ಸಿ ಮಕ್ಕಳನ್ನು ಗುರುತಿಸಿ. ಅವರೆಲ್ಲರಿಗೂ ಪ್ರತಿದಿನ ಸಂಜೆ ಒಂದೆಡೆ ಸೇರಿ ಸಾಮೂಹಿಕವಾಗಿ ಓದಲು ಒಂದು ಸ್ಥಳಾವಕಾಶ ಕಲ್ಪಿಸಿ. ಇದಕ್ಕಾಗಿ ಒಂದು ಸಮುದಾಯ ಭವನವಿರಬಹುದು, ಶಾಲೆಯ ಆವರಣ ವಿರಬಹುದು, ಗ್ರಂಥಾಲಯವಾಗಬಹುದು ಅಥವಾ ಯಾವುದೇ ಸುಲಭವಾಗಿ ತಲುಪಬಹುದಾದ ಸ್ಥಳವಿರ ಬಹುದು.**


ಗ್ರಾಮಗಳ ಸಮುದಾಯ ಭವನ/ ಗ್ರಂಥಾಲಯಗಳಲ್ಲಿ ವಿದ್ಯಾರ್ಥಿಗಳ ಸಾಮೂಹಿಕ ಓದು




ಒಟ್ಟಾಗಿ ಓದಿದಾಗ ಏನಾಗುತ್ತದೆ?
ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ.
ಸಂದೇಹಗಳನ್ನು ಹಂಚಿಕೊಳ್ಳುತ್ತಾರೆ.
ಪರಸ್ಪರ ಸ್ಪೂರ್ತಿ ತುಂಬುತ್ತಾರೆ.
ಕಲಿಕೆಯ ವಾತಾವರಣ ಸೃಷ್ಟಿಯಾಗುತ್ತದೆ.
ಸಮೂಹ ಕಲಿಕೆಯ ಶಕ್ತಿ ಅನಾವರಣಗೊಳ್ಳುತ್ತದೆ.

**ಈ ಕಾರ್ಯದಲ್ಲಿ ಗ್ರಾಮದ ಸದಸ್ಯರು, ವಾರ್ಡ್ ಸದಸ್ಯರು, ಶಿಕ್ಷಣದ ಮಹತ್ವವನ್ನು ಬಲ್ಲ ಪ್ರತಿಯೊಬ್ಬರೂ ಕೈಜೋಡಿಸಬೇಕು. ನಮ್ಮೆಲ್ಲರ ಸಣ್ಣ ಪ್ರಯತ್ನ, ಈ ಮಕ್ಕಳ ದೊಡ್ಡ ಕನಸುಗಳಿಗೆ ನೀರೆರೆಯುತ್ತದೆ. ಅವರು ತಮ್ಮ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಲು ಇದು ಭದ್ರ ಬುನಾದಿಯಾಗುತ್ತದೆ.**

ಹಂಪಿ ಟೈಮ್ಸ್ ನಿಮ್ಮೊಂದಿಗಿದೆ!

**ಈ ಮಹತ್ಕಾರ್ಯದಲ್ಲಿ ನಿಮಗೆ ಸಂಪೂರ್ಣ ಬೆಂಬಲ ನೀಡಲು ಹಂಪಿಟೈಮ್ಸ್ ಸಿದ್ಧವಿದೆ. ಮಕ್ಕಳ ಭವಿಷ್ಯಕ್ಕೆ ಬೆಳಕಾಗಲು ನಾವು ನಿಮ್ಮೊಂದಿಗೆ ಹೆಜ್ಜೆ ಹಾಕುತ್ತೇವೆ.
ಬನ್ನಿ, ಇಂದೇ ಮಕ್ಕಳ ಭವಿಷ್ಯಕ್ಕಾಗಿ ಒಂದಾಗೋಣ. ನಮ್ಮೂರ ವಿದ್ಯಾರ್ಥಿಗಳು ನಮ್ಮ ಹೆಮ್ಮೆಯಾಗುವಂತೆ, ಅವರ ಯಶಸ್ಸಿಗೆ ಸೇತುವೆಯಾಗೋಣ.
ಈ ಮೂಲಕ ನಮ್ಮ ಗ್ರಾಮ, ನಮ್ಮ ವಾರ್ಡ್‌ಗೆ ಕೀರ್ತಿ ತರೋಣ.
ನಿಮ್ಮ ಒಂದು ಚಿಕ್ಕ ಪ್ರಯತ್ನ, ನೂರಾರು ಮಕ್ಕಳ ಭವಿಷ್ಯಕ್ಕೆ ದೊಡ್ಡ ಬೆಳಕು!**

SCAN to READ
HAMPI TIMES E-PAPER

ನಿಮ್ಮ ಅಭಿಪ್ರಾಯಗಳಿಗೆ ಸ್ವಾಗತ, ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : 9448633038, ಹೊಸಪೇಟೆ, ವಿಜಯನಗರ ಜಿಲ್ಲೆ

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ವಿಶ್ವಾವಸು

**02–07–2025 – ಬುಧವಾರ**

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಉ.ಫಾಲ್ಗುಣಿ |
| ಯೋಗ | : ವರಿಯಾಣ |
| ಕರಣ | : ವಾಣಿಜ |
| ಸೂರ್ಯೋದಯ | : 05:46:24 |
| ಸೂರ್ಯಾಸ್ತ | : 19:15:38 |
| ರಾಹು ಕಾಲ | : 12:31–14:12 |
| ಯಮಘಂಡ ಕಾಲ | : 07:28–09:09 |
| ಗುಳಿಕ ಕಾಲ | : 10:50–12:31 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 01–07–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1624.38 ಅಡಿ |
| ಒಳ ಹರಿವು | 33916 ಕ್ಯುಸೆಕ್ |
| ಹೊರ ಹರಿವು | 2389 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 74.486 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1584.15 ಅಡಿ |
| ಒಳ ಹರಿವು | 11854 ಕ್ಯುಸೆಕ್ |
| ಹೊರ ಹರಿವು | 296 ಕ್ಯುಸೆಕ್ |
| ಸಾಮರ್ಥ್ಯ | 6.782 ಟಿಎಂಸಿ |





EVENT Media Coverage
Call us
94486 33038


# ಸರ್ಕಾರಿ ಕೆಲಸದ ವೇಗ ಹೆಚ್ಚಿಸಿ ಜನರ ಕಚೇರಿ ಅಲೆದಾಟ ತಪ್ಪಿಸಿ

### ಶಾಸಕ ನೇಮಿರಾಜ ನಾಯ್ಕ ಅಧಿಕಾರಿಗಳಿಗೆ ಸೂಚನೆ | ಸರ್ಕಾರಿ ಕಚೇರಿಗೆ ಬರುವ ಜನರನ್ನು ಗೌರವದಿಂದ ಕಾಣಿ



■ **ಹಂಪಿ ಟೈಮ್ಸ್ ಕೊಟ್ಟೂರು**

ತಾಲೂಕಿನ ಕಂದಾಯ ಇಲಾಖೆಯಲ್ಲಿನ ಸೇವೆಗಳನ್ನು ಜನತೆಗೆ ತಡವಿಲ್ಲದೇ ತಲುಪಿಸಲು ಗ್ರಾಮ ಸಹಾಯಕರಿಂದಿಡಿದು ತಹಸೀಲ್ದಾರರ ವರೆಗಿನ ಎಲ್ಲ ಸಿಬ್ಬಂದಿ ಕೆಲಸಕ್ಕೆ ವೇಗ ನೀಡಬೇಕು ಎಂದು ಶಾಸಕ ಕೆ.ನೇಮಿರಾಜನಾಯ್ಕ ಸೂಚಿಸಿದರು.

ಮಂಗಳವಾರ ಪಟ್ಟಣದ ತಾಲೂಕು ಕಚೇರಿಯ ಮಹಾತ್ಮಾ ಗಾಂಧೀಜಿ ಸಭಾಂಗಣದಲ್ಲಿ ಆಯೋಜಿಸಿದ್ದ ಕಂದಾಯ ದಿನಾಚರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಕೂಡ್ಲಿಗಿಯಿಂದ ತಾಲೂಕು ಪ್ರತ್ಯೇಕಗೊಂಡ ನಂತರ ಈ ಭಾಗದ ಕಂದಾಯ ಸೇವೆಗಳಲ್ಲಿ ವ್ಯತಯವಾಗುತ್ತಿರುವುದು ಗಮನಕ್ಕೆ ಬಂದಿದೆ. ಕಚೇರಿಗೆ ಬರುವ ಜನರನ್ನು ಕೂರಿಸಿ ಸಮಾಧಾನ ದಿಂದ ಮಾತನಾಡಿಸಿ ಹೆಚ್ಚು ಅಲೆದಾಡಿಸದೇ ಅವರ ಕೆಲಸಗಳನ್ನು ಸಿಬ್ಬಂದಿಯವರು ತಡವಿಲ್ಲದೇ ಮಾಡಿಕೊಡಬೇಕು. ಇದಕ್ಕಾಗಿ ಗ್ರಾಮ ಸಹಾಯಕರು, ವಿಎ, ಆರ್‌ಐ, ಶಿರಸ್ತೇದಾರ, ಉಪ ತಹಸೀಲ್ದಾರ್ ಹಾಗೂ ತಹಸೀಲ್ದಾರರು ಒಟ್ಟಾಗಿ ಕೆಲಸ ನಿರ್ವಹಿಸಬೇಕು. ಕ್ಷೇತ್ರದಲ್ಲಿ ವೈಯಕ್ತಿಕ ಆಸಕ್ತಿಯಿಂದ ನಾನು ಇಲಾಖೆ ಅಧಿಕಾರಿಗಳ ಸಹಕಾರದಿಂದ ಪಿ3 ಜಾರಿ ತಂದ ನಂತರ ಎಚ್ಚೆತ್ತುಗೊಂಡ ಸರಕಾರ ಆ ಯೋಜನೆಯನ್ನು ಜಾರಿ ಮಾಡಿತು ಎಂದರು.

ಗ್ರಾಮ ಲೆಕ್ಕಾಧಿಕಾರಿಗಳಿಗೆ ವೈಯಕ್ತಿವಾಗಿ ಲ್ಯಾಪ್ ಟ್ಯಾಪ್ ವಿತರಣೆ ಮಾಡುವ ಯೋಜನೆಗೆ ಮುಂದಾಗಿದ್ದೆ, ಅಷ್ಟರಲ್ಲಿ ಸರಕಾರವೇ ಲ್ಯಾಪ್ ಟ್ಯಾಪ್ ನೀಡಿದೆ. ಸದ್ಯಕ್ಕೆ ಭಾಗಶಃ ಬಂದಿದ್ದು ನಂತರದಲ್ಲಿ ಎಲ್ಲರಿಗೂ ಸಿಗಲಿವೆ. ಕ್ಷೇತ್ರದ ಯಾವುದೇ ಇಲಾಖೆಯ ಸಿಬ್ಬಂದಿಗೆ ಸರಕಾರದಿಂದ ಆಗಬೇಕಾದ ಕೆಲಸಗಳನ್ನು ತಿಳಿಸಿದಲ್ಲಿ ಅದನ್ನು ಮಾಡಿಕೊಡುವೆ. ನೌಕರರ ಅವಶ್ಯಕತೆಗಳ ಕುರಿತು ಸರಕಾರದ ಮಟ್ಟದಲ್ಲಿ ಗಮನ ಸೆಳೆಯುತ್ತೇನೆ. ಕಂದಾಯ ಇಲಾಖೆ ಮಾತ್ರವಲ್ಲದೇ ಎಲ್ಲ ಇಲಾಖೆಯವರು ಕಚೇರಿಗೆ ಬರುವ ಜನರನ್ನು ಗೌರವದಿಂದ ಕಾಣಬೇಕು. ಯಾರನ್ನೂ ಉದಾಸೀನ ಮಾಡಬಾರದು ಎಂದು ಕಿವಿಮಾತು ಹೇಳೀದರು.

ತಹಸೀಲ್ದಾರ ಜಿ.ಕೆ.ಅಮರೇಶ ಮಾತನಾಡಿ, ತಾಲೂಕಿನಲ್ಲಿ ಕಂದಾಯ ಇಲಾಖೆಯ ಎಲ್ಲ ದಾಖಲೆಗಳ ಡಿಜಿಟಿಲೀಕರಣ ಕಾರ್ಯ ಪ್ರಗತಿಯಲ್ಲಿದೆ. ಈಗಾಗಲೆ 7.23 ಲಕ್ಷ ಪ್ರತಿಗಳು ಶಿರಸ್ತೇದಾರರ ಸಹಿಯೊಂದಿಗೆ ಡಿಜಿಟಲ್ ಆಗಿದ್ದು, ಜನರು ನೇರವಾಗಿ ಪ್ರತಿ ಪಡೆಯಬಹುದಾಗಿದೆ.

ಕಂದಾಯ ಇಲಾಖೆಯ ಗ್ರಾಮ ಲೆಕ್ಕಾಧಿಕಾರಿಗಳಿಗೆ ಲ್ಯಾಪ್ ಟ್ಯಾಪ್ ವಿತರಣೆ ಮಾಡಿರುವುದರಿಂದ ಕೆಲಸಕ್ಕೆ ವೇಗ ಸಿಗಲಿದೆ. ತಾಲೂಕಿನಾದ್ಯಂತ ನಮ್ಮ ಇಲಾಖೆಯ ಸಿಬ್ಬಂದಿಯವರು ಜನತೆಗೆ ಸೂಕ್ತವಾಗಿ ಸ್ಪಂದಿಸಿ ಕೆಲಸ ಮಾಡುತ್ತಿದ್ದಾರೆ ಎಂದರು.

ಸಭೆಯಲ್ಲಿ ತಾಪಂ ಇಒ ಡಾ.ಆನಂದಕುಮಾರ್, ಎಡಿಆರ್‌ಎಲ್ ವಿಜಯಕುಮಾರ್, ಗ್ರೇಡ್ 2 ತಹಸೀಲ್ದಾರ ಎಂ. ಪ್ರತಿಭಾ, ಸರಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಯೋಗೀಶ್ವರ ದಿನ್ನೆ, ಮುಖಂಡರಾದ ಎಂಎಂಜೆ ಹರ್ಷವರ್ಧನ, ಮೃತ್ಯುಂಜಯ ಬಾದಾಮಿ, ಚಂದ್ರಶೇಖರ, ಕಾರ್ತಿಕ, ಬೂದಿ ಶಿವಕುಮಾರ ಸೇರಿ ಕಂದಾಯ ಇಲಾಖೆಯ ಎಲ್ಲ ಸಿಬ್ಬಂದಿ ಪಾಲ್ಗೊಂಡಿದ್ದರು.

ಗ್ರಾಮ ಲೆಕ್ಕಾಧಿಕಾರಿಗಳಿಗೆ ಸರಕಾರ ನೀಡಿರುವ ಲ್ಯಾಪ್‌ಟ್ಯಾಪ್‌ಗಳನ್ನು 14 ಗ್ರಾಮ ಲೆಕ್ಕಾಧಿಕಾರಿಗಳಿಗೆ ಹಾಗೂ ಫಲಾನುಭವಿಗಳಿಗೆ ಡಿಜಿಟಲ್ ದಾಖಲೆಗಳನ್ನು ಶಾಸಕರು ವಿತರಿಸಿದರು.

# ಬೆಳೆ ವಿಮೆ ರೈತರಿಗೆ ಅನುಕೂಲ

### ಜಿಲ್ಲಾಧಿಕಾರಿ ಸುರೇಶ ಬಿ. ಇಟ್ನಾಳ ಕೃಷಿ ಇಲಾಖೆಯ ಜಂಟಿ ನಿರ್ದೇಶಕರಿಗೆ ಸೂಚನೆ



■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯಲ್ಲಿ ಈ ಸಲ ಮಳೆ ಆಶಾದಾಯವಾಗಿ ಕಂಡು ಬರುತ್ತಿಲ್ಲ ಹಾಗಾಗಿ ಜಿಲ್ಲೆಯ ಎಲ್ಲಾ ರೈತರಿಗೆ ಬೆಳೆ ವಿಮೆ ಮಾಡಲು ತಿಳಿಸಬೇಕೆಂದು ಜಿಲ್ಲಾಧಿಕಾರಿ ಸುರೇಶ ಬಿ. ಇಟ್ನಾಳ ಅವರು ಕೃಷಿ ಇಲಾಖೆಯ ಜಂಟಿ ನಿರ್ದೇಶಕರಿಗೆ ಸೂಚನೆ ನೀಡಿದರು.

ಅವರು ಸೋಮವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಕರೆದ ಕೃಷಿ ಹಾಗೂ ಕೃಷಿ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಕರೆದ ಸಭೆಯಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದರು.

ಇಲ್ಲಿಯವರೆಗೆ ಸರಿಯಾಗಿ ಜಿಲ್ಲೆಯಲ್ಲಿ ಮಳೆಯಾಗಿಲ್ಲ ಮುಂದೆಯು ಹೀಗೆ ಆದರೆ ರೈತರಿಗೆ ಕಷ್ಟವಾಗುತ್ತದೆ. ರೈತರು ಬೆಳೆ ವಿಮೆ ಈ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ಮಾಡಿಸಬೇಕು. ಕಳೆದ ವರ್ಷ ಎಷ್ಟು ಮಾಡಿದ್ದಾರೆ ಈ ಕುರಿತು ಅವರಿಗೆ ಸರಿಯಾಗಿ ಮಾಹಿತಿ ನೀಡಿ ಎಂದು ಕೃಷಿ ಇಲಾಖೆಯ ಅಧಿಕಾರಿಗಳಿಗೆ ಹೇಳಿದರು.

ಜಿಲ್ಲೆಯಲ್ಲಿ ಕ್ರಾಫ್ ಕಟಿಂಗ್ ಎಕ್ಸಪೇರಿಮಿಂಟ ಹೇಗೆ ನಡೆಯುತ್ತಿದೆ ಕಳೆದ ಸಲ ಏನಾದರೂ ಸಮಸ್ಯೆಗಳಾಗಿದ್ದರೆ ಅವುಗಳು ಈ ಸಲ ಮರುಕಳಿಸದಂತೆ ನೋಡಿಕೊಳ್ಳಬೇಕು. ತಮಗೆ ವಹಿಸಿದ ಕೆಲಸವನ್ನು ಜವಾಬ್ದಾರಿಯಿಂದ ಮಾಡಬೇಕು ಯಾವುದೇ ನೆಪ ಹೇಳುವಹಾಗಿಲ್ಲ ಎಂದರು.

ಸಾಮಾಜಿಕ ಅರಣ್ಯ ವಿಭಾಗದಿಂದ ಬರುವ ವರ್ಷ ಜಿಲ್ಲೆಯಲ್ಲಿ ಒಂದು ಲಕ್ಷ ಗಿಡಗಳನ್ನು ಹಚ್ಚಬೇಕು. ರಸ್ತೆಯ ಎಲ್ಲಾ ಕಡೆಗಳಲ್ಲಿ ಹಚ್ಚುವುದರ ಜೊತೆಗೆ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ವಸತಿ ನಿಲಯಗಳ ಕಾಂಪೌಂಡ್ ಒಳಗಡೆ ಆಯಾ ಇಲಾಖೆಯಿಂದ ಅವರಿಗೆ ಎಷ್ಟು ಗಿಡಗಳನ್ನು ಬೇಕು ಎಂಬ ಮಾಹಿತಿ ಪಡೆದು ಅವರಿಗೆ ಗಿಡಗಳನ್ನು ನೀಡಲು ಉಪ ಅರಣ್ಯ ಸಂರಕ್ಷಣಾಧಿಕಾರಿ ಹುಸೇನ ಪೆಂಡಾರಿಗೆ ಸೂಚನೆ ನೀಡಿದರು.

ಕೃಷಿ ಸಂಬಂಧಿಸಿದ ಇಲಾಖೆಗಳು ಹಾಕಿಕೊಂಡ ಐದು ವರ್ಷಗಳ ಮಾಹಿತಿಯನ್ನು ಪಡೆದ ಜಿಲ್ಲಾಧಿಕಾರಿಗಳು. ಪೊಟೇಶನಲ್ ಜಿಐ ಟ್ಯಾಗ್ ಯಾವ ಉತ್ಪನ್ನ ನಮ್ಮ ಜಿಲ್ಲೆಯಲ್ಲಿದೆ. ಶ್ರೀ ಗಂಧ ಬೆಳೆಸುವವರಿಗೆ ಜಿಲ್ಲೆಯಲ್ಲಿ ಪ್ರೊಮೋಟ ಮಾಡಿ. ಯಾವುದೇ ಬೀಜ ಮತ್ತು ರಸಗೊಬ್ಬರಗಳ ಸಮಸ್ಯೆಗಳಾಗದಂತೆ ಕೃಷಿ ಇಲಾಖೆಯ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದರು.

ಪಶು ಸಂಗೋಪನೆ. ಹೈನುಗಾರಿಕೆ. ಮೀನುಗಾರಿಕೆ. ಕೋಳಿ ಸಾಕಾಣಿಕೆ. ರೇಷ್ಮೆ. ರೈಸ್ ಟೆಕ್ನಾಲಜಿ ಪಾರ್ಕ್ ಸೇರಿದಂತೆ ಇತರೆ ಕೃಷಿ ಸಂಬಂಧಿಸಿದ ಇಲಾಖೆಯ ವಿಷಯಗಳ ಕುರಿತು ಜಿಲ್ಲಾಧಿಕಾರಿಗಳು ಸಭೆಯಲ್ಲಿ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಸಭೆಯ ನಂತರ ಜಿಲ್ಲಾಧಿಕಾರಿಗಳು ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ ಬಿಮಾ ಯೋಜನೆ ಕರಪತ್ರಗಳನ್ನು ಬಿಡುಗಡೆಗೊಳಿಸಿದರು.

ಈ ಸಭೆಯಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ. ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ. ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ರುದ್ರೇಶಪ್ಪ ಟಿ. ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಕೃಷ್ಣ ಉಕ್ಕುಂದ. ಉಪ ಅರಣ್ಯ ಸಂರಕ್ಷಣಾಧಿಕಾರಿ ಹುಸೇನ್ ಪೆಂಡಾರಿ ಸೇರಿದಂತೆ ಕೃಷಿ ಹಾಗೂ ಇತರೆ ವಿವಿಧ ಇಲಾಖೆಯ ಅಧಿಕಾರಿಗಳಿದ್ದರು.

# ಪತ್ರಿಕೆ ಸಮಾಜದ ಬದಲಾವಣೆಗೆ ದಿಕ್ಸೂಚಿ



**ಮೊದಲ ಪುಟದಿಂದ**

ಫಲಿತಾಂಶ ಪ್ರಗತಿಗೆ ನಗರಸಭೆವತಿಯಿಂದ ಸಂಪೂರ್ಣ ಸಹಕಾರ ನೀಡಲಾಗುವುದು. ನಗರದ ಸ್ವಚ್ಛತೆ ಕಾಪಾಡಿಕೊಂಡಷ್ಟು ಆರೋಗ್ಯ ವೃದ್ಧಿಯಾಗುತ್ತದೆ ಎಂಬುದನ್ನು ಪ್ರತಿಯೊಬ್ಬರು ಅರಿತುಕೊಳ್ಳಬೇಕು ಎಂದರು.

ಹಂಪಿ ಟೈಮ್ಸ್ ಸಂಪಾದಕ ಬಸಾಪುರ ಬಸವರಾಜ ಮಾತನಾಡಿ, ದಿನಪತ್ರಿಕೆಗಳನ್ನು ಖರೀದಿಸಿ ಓದುವ ಹವ್ಯಾಸ ಬೆಳೆಸಿಕೊಂಡಷ್ಟು ಕನ್ನಡವನ್ನು ಕನ್ನಡದ ಪತ್ರಿಕೆಗಳನ್ನು ಬೆಳೆಸಿದ ಕೀರ್ತಿ ಓದುಗರಿಗೆ ಸಲ್ಲುತ್ತದೆ ಎಂದರು.

ಕರ್ನಾಟಕ ಪತ್ರಕರ್ತರ ಸಂಘದ ವಿಜಯನಗರ ಜಿಲ್ಲಾಧ್ಯಕ್ಷ ಬಿ.ಎಚ್.ಎಸ್. ರಾಜು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, ವಿದ್ಯಾರ್ಥಿಗಳು ಪತ್ರಿಕೋದ್ಯಮ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಬಹುದು. ನಿಮ್ಮ ಗುರಿಗಳನ್ನು ತಲುಪಲು ಸಾಧ್ಯವಾಗದಿದ್ದಾಗ ಯಾರೂ ಭಯಪಡಬೇಡಿ, ಆತ್ಮಹತ್ಯೆಗಳಿಗೆ ಶರಣಾಗಬೇಡಿ. ಹಾಗೆಯೇ, ದುಶ್ಚಟಗಳಿಗೆ ಬಲಿಯಾಗದೆ, ಪತ್ರಿಕೋದ್ಯಮಕ್ಕೆ ಬಂದು ಸಮಾಜದ ಅಂಕುಡೊಂಕುಗಳನ್ನು ತಿದ್ದಬೇಕು ಎಂದು ಕರೆ ನೀಡಿದರು. ಸರ್ಕಾರದ ಕಾರ್ಯನಿರ್ವಹಣೆಯಲ್ಲಿನ ತಪ್ಪುಗಳನ್ನು ಎತ್ತಿ ತೋರಿಸುವ ಮತ್ತು ಸಮಾಜದಲ್ಲಿ, ಆಡಳಿತದಲ್ಲಿ ದುಷ್ಟ ಶಕ್ತಿಗಳು ವಿಜೃಂಭಿಸಿದಾಗ ಅವುಗಳ ವಿರುದ್ಧ ಧೈರ್ಯವಾಗಿ ಬರೆಯುವ ಕೆಲಸವನ್ನು ಪತ್ರಿಕೆಗಳು ನಿರ್ವಹಿಸುತ್ತವೆ ಎಂದು ಹೇಳಿದರು.

ವಾಯು ಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತ ಯೋಧರಾದ ಅಮರಿಸ್ ಮೊಂಟೆರೋ ಹಾಗೂ ಭೂ ಸೇನೆಯಲ್ಲಿ ಸೇವೆ ಸಲ್ಲಿಸಿದ ಮೇಜರ್ ಶ್ರೀನಿವಾಸಲು ಅವರನ್ನು ಸನ್ಮಾನಿಸಿ ಗೌರವಿಸಿಲಾಯಿತು

ಈ ಸಂದರ್ಭದಲ್ಲಿ ಕರ್ನಾಟಕ ಪತ್ರಕರ್ತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಮ್ ಜಿ ನಾಯ್ಕ, ಜಿಲ್ಲಾ ಉಪಾಧ್ಯಕ್ಷ ವಿ ಗಾಳಪ್ಪ, ಕಾರ್ಯದರ್ಶಿ ಗೀತಾ ಸುರೇಶ್, ಸಂಘಟನಾ ಕಾರ್ಯದರ್ಶಿ ಎ ಚಿದಾನಂದ, ಮತ್ತು ನಮ್ಮೂರ್ ಸುದ್ದಿಯ ಕೆ. ಬಿ. ಹಿರೇಮಠ್, ಸಂಘದ ಸದಸ್ಯರು, ವಿದ್ಯಾರ್ಥಿಗಳು, ಇತರರು ಇದ್ದರು. ಕರ್ನಾಟಕ ಪತ್ರಕರ್ತರ ಸಂಘದ ಖಜಾಂಚಿ ಮಂಜುನಾಥ ಲಕ್ಕಿಮರ ಪ್ರಾಸ್ತಾವಿಕ ಮಾತನಡಿದರು. ಸ್ಲಂ ವೆಂಕಿ ನಿರೂಪಿಸಿದರು.

# ಅಂಧ ಶ್ರವಣದೋಷವುಳ್ಳ ಮಕ್ಕಳಿಗೆ ಶಿಕ್ಷಕರಾಗಲು ಡಿಎಡ್ ತರಬೇತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಸರ್ಕಾರದ ವತಿಯಿಂದ ನಡೆಯುತ್ತಿರುವ ಅಂಧ ಹಾಗೂ ಶ್ರವಣದೋಷವುಳ್ಳ ಮಕ್ಕಳ ತರಬೇತಿ ಕೇಂದ್ರ, ಮೈಸೂರುನಲ್ಲಿ ಅಂಧ ಮಕ್ಕಳಿಗೆ ಹಾಗೂ ಶ್ರವಣದೋಷವುಳ್ಳ ಮಕ್ಕಳಿಗೆ ಶಿಕ್ಷಕರಾಗಲು 2 ವರ್ಷಗಳ ವಿಶೇಷ ಡಿಎಡ್ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಧಿಕಾರಿಗಳಾದ ರಾಮಾಂಜನೇಯ ತಿಳಿಸಿದ್ದಾರೆ.

ಈ ವಿಶೇಷ ಡಿಎಡ್, ಸಾಮಾನ್ಯ ಡಿಎಡ್ ಗೆ ಸಮಾನಾಂತರವಾಗಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.50 ರಷ್ಟು ಅಂಕ ಪಡೆದಿರಬೇಕು. ಎಸ್ಸಿ, ಎಸ್ಟಿ ಮತ್ತು ವಿಕಲಚೇತನ ವಿದ್ಯಾರ್ಥಿಗಳಿಗೆ ಶೇ.45 ಅಂಕಗಳೊಂದಿಗೆ ತೇರ್ಗಡೆಯಾಗಿರುವ ವಿದ್ಯಾರ್ಥಿಗಳು ಜು.12 ರೊಳಗಾಗಿ ವೆಬ್‌ಸೈಟ್ https://nber-rehabcounil.gov.in/ ನಲ್ಲಿ ಅರ್ಜಿ ಸಲ್ಲಿಸಬಹುದು. ಈ ತರಬೇತಿ ಕಾರ್ಯಕ್ರಮಗಳು ದಿನನಿತ್ಯ ನಡೆಯುತ್ತಿದ್ದು, ವಿಕಲಚೇತನರು ಸೇರಿದಂತೆ ಸಾಮಾನ್ಯ ವಿದ್ಯಾರ್ಥಿಗಳು ಸಹ ಅರ್ಜಿ ಸಲ್ಲಿಸಬಹುದು. ತರಬೇತಿಗಳು ಸಂಪೂರ್ಣವಾಗಿ ಉಚಿತವಾಗಿದ್ದು, ಯಾವುದೇ ಬೋಧನಾ ಶುಲ್ಕವಿರುವುದಿಲ್ಲ. ಹೆಲೆನ್ ಕೆಲ್ಲರ್ ಸರ್ಕಾರಿ ದೃಷ್ಟಿ ವಿಕಲಚೇತನ ಶಿಕ್ಷಕರ ತರಬೇತಿ ಕೇಂದ್ರ ಹಾಗೂ ಸರ್ಕಾರಿ ಶಿಕ್ಷಕರ ಶ್ರವಣದೋಷ ತರಬೇತಿ ಕೇಂದ್ರಗಳಲ್ಲಿ ತರಬೇತಿ ಕಾರ್ಯಕ್ರಮಗಳಿವೆ.

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು (ತರಬೇತಿ) ರವರ ಕಚೇರಿ, ಅಂಧ ಹಾಗೂ ಶ್ರವಣದೋಷವುಳ್ಳ ಮಕ್ಕಳ ತರಬೇತಿ ಕೇಂದ್ರ, ಪುಲಿಕೇಶಿ ರಸ್ತೆ, ತಿಲಕ್‌ನಗರ, ಮೈಸೂರು–570001. ದೂ.08212491600 ಮತ್ತು ತರಬೇತಿ ಸಂಯೋಜಕರು : ಆಶಾ. ವಿ. ಹಿರೇಮಠ್ ಮೊ.ನಂ. 9113561620 ಹಾಗೂ ಟಿ.ಡಿ ಮಂಜುನಾಥ ಮೊ.ನಂ.9686762378 ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಲು ವಿಜಯನಗರ ಜಿಲ್ಲಾ ಅಂಗವಿಕಲರ ಕಲ್ಯಾಣಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜು.5 ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ –3 : ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ

■ **ಹಂಪಿ ಟೈಮ್ಸ್ ಚಿತ್ರದುರ್ಗ**

ಪರೀಕ್ಷಾ ಗೌಪ್ಯತೆ ಹಾಗೂ ಪಾವಿತ್ರತೆಗೆ ತೊಂದರೆಯಾಗದಂತೆ ಎಸ್.ಎಸ್.ಎಲ್.ಸಿ ಪರೀಕ್ಷೆ–3 ನಿಯೋಜಿಸಿದ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಮನ್ವಯದಿಂದ ಕಾರ್ಯ ನಿರ್ವಹಿಸುವ ಮೂಲಕ ಯಾವುದೇ ಲೋಪದೋಷಗಳಿಗೆ ಅವಕಾಶ ನೀಡದೇ ಜಿಲ್ಲೆಯಲ್ಲಿ ಅಚ್ಚುಕಟ್ಟಾಗಿ ಪರೀಕ್ಷಾ ಕಾರ್ಯ ನಿರ್ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಎಸ್.ಎಸ್.ಎಲ್.ಸಿ ಪರೀಕ್ಷೆ–3 ಸಂಬಂಧ ಜರುಗಿದ ಪೂರ್ವ ಸಿದ್ಧತೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪರೀಕ್ಷಾ ಮಾರ್ಗದರ್ಶಿ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು. ಮಂಡಳಿಯಿಂದ ಸರಬರಾಜು ಆಗುವ ಪ್ರಶ್ನೆ ಪತ್ರಿಕೆಗಳನ್ನು ಸಂಗ್ರಹಿಸಿಡುವ ತಾಲೂಕು ಖಜಾನೆಗಳಲ್ಲಿ ಹೆಚ್ಚಿನ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಬೇಕು. ಪರೀಕ್ಷೆಯ ಪಾವಿತ್ರತೆ ಕಾಪಾಡಲು ವೆಬ್ ಕಾಸ್ಟಿಂಗ್ ಘಟಕ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಲು ಅಗತ್ಯ ಕ್ರಮವಹಿಸಬೇಕು ಎಂದು ಹೇಳಿದರು.

24 ಪರೀಕ್ಷಾ ಕೇಂದ್ರ 7453 ವಿದ್ಯಾರ್ಥಿಗಳು: ಇದೇ ಜುಲೈ 05 ರಿಂದ 11 ರವರೆಗೆ ಎಸ್.ಎಸ್.ಎಲ್.ಸಿ ಪರೀಕ್ಷೆ–3 ನಡೆಯಲಿದೆ. ಜುಲೈ 05 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.15 ರವರೆಗೆ ಪ್ರಥಮ ಭಾಷೆ, ಜುಲೈ 07ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.15 ರವರೆಗೆ ವಿಜ್ಞಾನ, ಜುಲೈ 08ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ ದ್ವಿತೀಯ ಭಾಷೆ, ಜುಲೈ 09ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.15 ರವರೆಗೆ ಗಣಿತ, ಜುಲೈ 10ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ ತೃತೀಯ ಭಾಷೆ ಮತ್ತು ಬೆಳಿಗ್ಗೆ 10 ರಿಂದ ಮಧ್ಯಾಹ್ನ 12.15 ರವರೆಗೆ ಎನ್‌ಎಸ್‌ಕ್ಯೂಎಫ್ ವಿಷಯಗಳು, ಜುಲೈ 11ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.15 ರವರೆಗೆ ಸಮಾಜ ವಿಜ್ಞಾನ ವಿಷಯದ ಪರೀಕ್ಷೆ ನಡೆಯಲಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ–3ಗೆ 7453 ವಿದ್ಯಾರ್ಥಿಗಳು ನೊಂದಣಿಯಾಗಿದ್ದು, ಚಳ್ಳಕೆರೆ–06 ಪರೀಕ್ಷಾ ಕೇಂದ್ರಗಳು, ಚಿತ್ರದುರ್ಗ–07 ಪರೀಕ್ಷಾ ಕೇಂದ್ರಗಳು, ಹಿರಿಯೂರು–04 ಪರೀಕ್ಷಾ ಕೇಂದ್ರಗಳು, ಹೊಳಲ್ಕೆರೆ–02 ಪರೀಕ್ಷಾ ಕೇಂದ್ರಗಳು, ಹೊಸದುರ್ಗ–03 ಪರೀಕ್ಷಾ ಕೇಂದ್ರಗಳು ಹಾಗೂ ಮೊಳಕಾಲ್ಮುರು–02 ಪರೀಕ್ಷಾ ಕೇಂದ್ರಗಳು ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 24 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಎಲ್ಲ ಪರೀಕ್ಷಾ ಕೇಂದ್ರಗಳಿಗೆ ಈಗಾಗಲೇ ಮುಖ್ಯ ಅಧೀಕ್ಷಕರು ಮತ್ತು ಕಸ್ಟೋಡಿಯನ್ ಅವರನ್ನು ನೇಮಕ ಮಾಡಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಶಿಕ್ಷಣಾಧಿಕಾರಿ ಎನ್.ಆರ್.ತಿಪ್ಪೇಸ್ವಾಮಿ ಸಭೆಗೆ ಮಾಹಿತಿ ನೀಡಿದರು.

ಪರೀಕ್ಷೆಯ ಪಾವಿತ್ರತೆ ಕಾಪಾಡಲು ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನಲ್ಲಿ ಕೇಂದ್ರಿಕೃತ ವೀಕ್ಷಣಾ ಘಟಕವನ್ನು ಸ್ಥಾಪಿಸಿದೆ. ಇಲ್ಲಿಗೆ ನೋಡಲ್ ಅಧಿಕಾರಿಗಳು ಮತ್ತು ವೀಕ್ಷಕರ ತಂಡವನ್ನು ರಚಿಸಲಾಗಿದೆ. ತಾಂತ್ರಿಕ ಸಹಾಯಕರನ್ನು ಸಹ ನೇಮಕ ಮಾಡಲಾಗಿದೆ. ಈ ತಂಡಕ್ಕೆ ಲ್ಯಾಪ್‌ಟಾಪ್, ಕಂಪ್ಯೂಟರ್‌ಗಳನ್ನು ಒದಗಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಎಲ್ಲ ಪರೀಕ್ಷಾ ಕೊಠಡಿಗಳಲ್ಲಿಯೂ ಸಿಸಿಟಿವಿ ಲಭ್ಯತೆ ಇರುತ್ತದೆ ಎಂದು ತಿಳಿಸಿದರು.

ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆಪತ್ರಿಕೆಗಳನ್ನು ವಿತರಿಸಲು ಹಾಗೂ ಉತ್ತರ ಪತ್ರಿಕೆಗಳನ್ನು ಹಿಂಪಡೆದು ತಾಲ್ಲೂಕು ಹಂತಕ್ಕೆ ತಲುಪಿಸಲು ಮಾರ್ಗಾಧಿಕಾರಿಗಳನ್ನು ನೇಮಿಸಲಾಗಿದೆ. ಆಯಾ ತಾಲ್ಲೂಕಿನ ಸಂಖ್ಯೆಗನುಗುಣವಾಗಿ ಮಾರ್ಗಾಧಿಕಾರಿಗಳಿಗೆ ವಾಹನಗಳನ್ನು ಒದಗಿಸಲು ಕೋರಿದರು. ಮಾರ್ಗಾಧಿಕಾರಿಗಳ ವಾಹನಗಳಿಗೆ ಸಂಬಂಧಿಸಿದ ತಾಲ್ಲೂಕು ಖಜಾನೆಯಿಂದ ಪರೀಕ್ಷಾ ಕೇಂದ್ರಗಳಿಗೆ ತೆರಳುವವರೆಗೆ ಹಾಗೂ ಉತ್ತಮ ಪತ್ರಿಕೆಗಳನ್ನು ತಾಲ್ಲೂಕು ಹಂತಕ್ಕೆ ಹಿಂದಿರುಗಿಸುವವರೆಗೆ ಸಶಸ್ತ್ರ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲು ಕೋರಿದರು.

ಜಿಲ್ಲೆಯ 24 ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳಲ್ಲಿ 4 ರಿಂದ 5 ಪರೀಕ್ಷಾ ಕೇಂದ್ರಗಳಿಗೆ ಒಬ್ಬರಂತೆ ಜಿಲ್ಲಾ ಹಂತದ, ತಾಲ್ಲೂಕು ಹಂತದ ಅಧಿಕಾರಿಗಳನ್ನು ವೀಕ್ಷಕರನ್ನಾಗಿ ನೇಮಕ ಮಾಡಬೇಕು. ಎಲ್ಲ ಪರೀಕ್ಷಾ ಕೇಂದ್ರಗಳಿಗೂ ಪೊಲೀಸ್ ಸಿಬ್ಬಂದಿಯನ್ನು ಪರೀಕ್ಷೆ ನಡೆಯುವ ನಿಯೋಜಿಸಲು ತಿಳಿಸಿದರು.

ಪರೀಕ್ಷಾ ಪಾವಿತ್ರತೆ ಕಾಪಾಡಲು ಹಾಗೂ ಪರೀಕ್ಷಾ ಸುರಕ್ಷತಾ ಹಿತದೃಷ್ಠಿಯಿಂದ ಪರೀಕ್ಷೆ ನಡೆಯುವ ದಿನಗಳಂದು ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಪ್ರದೇಶವನ್ನು 144 ಸೆಕ್ಷನ್ ಪ್ರಕಾರ ನಿಷೇಧಿತ ಪ್ರದೇಶ ಎಂದು ಘೋಷಣೆ ಮಾಡಬೇಕು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ ಅವರು, ಪರೀಕ್ಷಾ ನಡೆಯುವ ದಿನದಂದು ವಿದ್ಯುತ್ ಅಡಚಣೆಯಾಗದಂತೆ ಬೆಸ್ಕಾಂ ಕಾರ್ಯಪಾಲಕ ಅಭಿಯಂತರರಿಗೆ ಕೋರಿದರು.

ಸಭೆಯಲ್ಲಿ ಡಯಟ್ ಪ್ರಾಂಶುಪಾಲ ನಾಸಿರುದ್ದಿನ್, ಶಿಕ್ಷಣಾಧಿಕಾರಿ ಸಿದ್ದಪ್ಪ, ಆರು ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪ್ರಾದೇಶಿಕ ಸಾರಿಗೆ ಅಧಿಕಾರಿ ಭರತ್ ಎಂ. ಕಾಳೇಸಿಂಘೆ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಇದ್ದರು.

# ರಾಬಕೊವಿ ಜಿಲ್ಲಾ ಹಾಲು ಉತ್ಪಾದಕರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಗೆ ಇಬ್ಬರು ನಾಮಪತ್ರ ಸಲ್ಲಿಕೆ

■ **ಹಂಪಿ ಟೈಮ್ಸ್ ಬಳ್ಳಾರಿ**

ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಗೆ ನಾಮಪತ್ರ ಸಲ್ಲಿಕೆಯ ಎರಡನೇಯ ದಿನವಾದ ಮಂಗಳವಾರದಂದು ಎರಡು ನಾಮಪತ್ರ ಸಲ್ಲಿಕೆಯಾಗಿವೆ.

ವಿಜಯನಗರ ಜಿಲ್ಲೆಯ ಜಿ.ನಾಗಮಣಿ ಅವರು ಎರಡು ಉಮೇದುವಾರಿಕೆ ಸಲ್ಲಿಸಿದ್ದಾರೆ. ನಾಮಪತ್ರ ಸಲ್ಲಿಸಲು ಜುಲೈ 02 ಕೊನೆಯ ದಿನವಾಗಿದೆ. ಜುಲೈ 03 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಅದೇ ದಿನ ಕ್ರಮಬದ್ಧ ನಾಮಪತ್ರಗಳ ಘೋಷಣೆ ಮಾಡಲಾಗುತ್ತದೆ.

ನಾಮಪತ್ರಗಳನ್ನು ಹಿಂಪಡೆಯಲು ಜುಲೈ 04 ಕೊನೆಯ ದಿನವಾಗಿದೆ. ಜುಲೈ 10 ರಂದು ಮತದಾನ ನಡೆಯಲಿದೆ. ಅದೇ ದಿನ ಫಲಿತಾಂಶ ಪ್ರಕಟವಾಗಲಿದೆ ಎಂದು ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಚುನಾವಣಾಧಿಕಾರಿಯೂ ಆದ ಸಹಾಯಕ ಆಯುಕ್ತ ಪಿ.ಪ್ರಮೋದ್ ಅವರು ತಿಳಿಸಿದ್ದಾರೆ.